ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ)

ವಿಧೇಯಕ 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ಉದ್ದೇಶ ಎಂದರೆ ಹಿಂದೆ ಇರತಕ್ಕಂಥ ಈ ಸೆಬ್ಪ್ ಅಸೆಸ್‌ಮೆಂಟ್ ಬಗ್ಗೆ ಅನೇಕ ಸಲ ಚರ್ಚೆಯಾದವು. ಮೂರು-ನಾಲ್ಕು ಸಾರಿ ನಾವು ಎಲ್ಲಾ ಫ್ಲೋರ್ ಲೀಡರ್ಸ್‌ನ್ನು ಕರೆಸಿ ಮಾತನಾಡಿ ಇದನ್ನು ತಿದ್ದುಪಡಿ ಮಾಡಬೇಕೆಂದು ಹೇಳಿ ಅವರ ಕಡೆಯಿಂದ ಸೂಚನೆಯನ್ನು ಪಡೆದು ಇವತ್ತು ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಇದರ ಮೂಲ ಉದ್ದೇಶ ಎಂದರೆ –

(1) 2002–2003, 2003–2004 ಮತ್ತು 2004–2005ರ ವರ್ಷಗಳಲ್ಲಿ ವಿಧಿಸಿದ ಸ್ವತ್ತು ತೆರಿಗೆಯನ್ನು 2001–2002ನೇ ಸಾಲಿನಲ್ಲಿ ವಿಧಿಸಿದ್ದ ತೆರಿಗೆಯ ಎರಡೂ ವರೆಯಷ್ಟರಿಂದ ಎರಡು ವರ್ಷಕ್ಕೆ ಇಳಿಸುವುದು ;

(2) ಪೌರಸಭೆಗಳು ಮತ್ತು ಪೌರನಿಗಮಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವರ್ಗದ ಕಟ್ಟಡಗಳ ಸುತ್ತಲಿನ ಖಾಲಿ ಭೂಮಿಯ ಮೇಲೆ ಸ್ವತ್ತು ತೆರಿಗೆಯ ವಿನಾಯಿತಿ ನೀಡುವುದು ;

(3) ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯನ್ನುಳ್ಳ ಪುರಸಭೆಗಳಲ್ಲಿ ಖಾಲಿ ಭೂಮಿಯ ಸಂಬಂಧದಲ್ಲಿ ತೆರಿಗೆಯ ಸಂಪೂರ್ಣ ವಿನಾಯಿತಿ ;

(4) 2005–2006ನೇ ವರ್ಷದಿಂದ ಪ್ರಾರಂಭಿಸಿ ಮೂರು ವರ್ಷಗಳಿಗೊಮ್ಮೆ ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು ಮತ್ತು ಹಾಗೆ ಹೆಚ್ಚಿಸುವುದಕ್ಕೆ ಮಾರ್ಗದರ್ಶನ ನೀಡುವುದು ;

(5) ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯುಳ್ಳ ಪೌರಸಭೆಗಳಲ್ಲಿ ಇರುವಂಥ ವಾಣಿಜ್ಯ ಕಟ್ಟಡಗಳ ಮೇಲೆ ತೆರಿಗೆಯ ಗರಿಷ್ಟ ಮಿತಿಯನ್ನು ಶೇ 1.5 ರಿಂದ ಶೇ. 0.9ಕ್ಕೆ ಹಾಗೂ ವಾಸಗೃಹದ ಕಟ್ಟಡಗಳ ಸಂಬಂಧದಲ್ಲಿ ಶೇ. 1.0 ಯಿಂದ ಶೇ. 0.6ಕ್ಕೆ ಇಳಿಸುವುದು ;

(6) ತತ್ಪರಿಣಾಮದ ಇತರ ಕೆಲವು ತಿದ್ದುಪಡಿಗಳನ್ನೂ ಮಾಡಲಾಗಿದೆ.

ಈ ವಿಧೇಯಕವನ್ನು ಕರ್ನಾಟಕ ಪೌರಸಭೆಗಳ (ತಿದ್ದುಪಡಿ ಆಧ್ಯಾದೇಶ, 2004 (2004ರ ಕರ್ನಾಟಕ ಅಧ್ಯಾದೇಶ 3) ಮತ್ತು ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧ್ಯಾದೇಶ, 2004

(2004ರ ಕರ್ನಾಟಕ ಅಧ್ಯಾದೇಶ 2) ಇವುಗಳ ಬದಲಾಗಿ ಕೆಲವೊಂದು ಮಾರ್ಪಾಡುಗಳೊಡನೆ ತರಲು ಉದ್ದೇಶಿಸಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಇದರಲ್ಲಿ ಮಂತ್ರಿಗಳು ಮತ್ತು ನಾವು ಎಲ್ಲಾ ಎರಡು ದಿವಸ ಒಂದೇಸಮನೆ ಚರ್ಚೆ ಮಾಡಿದ್ದೇವೆ. ಏನು ಅಸೆಸ್‌ಮೆಂಟ್ ವ್ಯಾಲ್ಯೂ ಮಾಡುತ್ತಿದ್ದೀರಿ ಅದರ 50 ಪರ್ಸೆಂಟ್‌ಗೆ ಟ್ಯಾಕ್ಸ್ ಹಾಕುವುದಕ್ಕೆ ನಾವು ಅವತ್ತು ಎಲ್ಲಾ ವಿರೋಧಪಕ್ಷಗಳಲ್ಲಿ ಕುಳಿತುಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳ ಎದುರಿಗೆ ಎತ್ತಿದ್ದೇವೆ. ನಿನ್ನೆ ಕೂಡ ಮಂತ್ರಿಗಳು ನಮ್ಮ ಹತ್ತಿರ ಮಾತನಾಡುತ್ತಲೇ ಹೇಳಿದಂತೆ Not less than 50% – ಅಂತ ಅಧಿಕಾರಿಗಳು ಬಿಲ್ ಮಾಡಿಕೊಂಡುಬಂದರು. ನೋಡಿ, ಆ ಸಭೆಯಲ್ಲಿ ಏನು ಸ್ಪಷ್ಟವಾದ ತೀರ್ಮಾನವಾಗಿದೆ, ನಿಖರವಾದ ತೀರ್ಮಾನವಾಗಿದೆ, ಹಾಗೆ ಶಾಸನಸಭೆಗೆ ಬಿಲ್‌ನ್ನು ಇಡುತ್ತಾರೆ ಎಂದರೆ ಇದೇನು ಬ್ಯೂರೋಕ್ರಾಟ್ಸ್ ಹೇಳಿದಹಾಗೆ ಅವರು ಕೇಳುವುದು ಅದರೆ ನಮ್ಮನ್ನೆಲ್ಲಾ ಸಭೆಗೆ ಕರೆಯುವ ಅಗತ್ಯತೆ ಇರಲ್ಲಿಲ್ಲ. ನಾವೆಲ್ಲಾ ಹೋಗಿ ನಮ್ಮ ಅಭಿಪ್ರಾಯ ಕೊಡುವ ಪ್ರಶ್ನೆಯೂ ಇರಲಿಲ್ಲ. ಸರ್ಕಾರವನ್ನು ಯಾರು ನಡೆಸುತ್ತಿದ್ದಾರೆ ಎಂಬುದು ನಮಗೆ ಅರ್ಥವಾಗಬೇಕಾಗುತ್ತದೆ. ಏಕೆಂದರೆ ನಾನು ಮತ್ತು ಅವರು ನಿನ್ನೆ ಮೂರು–ನಾಲ್ಕು ಸಲ ಮಾತನಾಡಿದ್ದೇವೆ. ನಾವು ಸ್ಪಷ್ಟವಾಗಿ ಹೇಳಿದ್ದೇವೆ. ವಾಲ್ಯುಯೇಶನ್‌ನ್ನು ತೆಗೆದುಕೊಳ್ಳಬೇಕಾದರೆ, ನೀವು ಟ್ಯಾಕ್ಸೆಬಲ್ ವ್ಯಾಲ್ಯುವನ್ನು ಇರುವ ವ್ಯಾಲ್ಯುನಲ್ಲಿ 50 ಪರ್ಸೆಟ್‌ಗೆ ಇಳಿಸಿ ಅಂತ ಮೊದಲನೆ ಷರತ್ತುಹಾಕಿದ್ದವು. ಮಾನ್ಯ ಯಡಿಯೂರಪ್ಪನವರು ಇಲ್ಲ. ಅವರು ಆ ಸಭೆಯಲ್ಲಿ ಇದ್ದರು. ಮೊದಲು ಅವರು ಇದಕ್ಕೆ ಒಪ್ಪಿದ ಮೇಲೆ ಬೇರೆ ಚರ್ಚೆಗಳನ್ನು ಮಾಡಿದೆವು. ಈಗ ನಿನ್ನೆ ಏನು ಮಾಡಿದಿರಿ ? Not less than 50% – ಅಂತ ಹೇಳಿ ಮಾಡಿದರೆ ಹೇಗೆ ಅಂತ ಇವರು ನಮ್ಮನ್ನು ಕೇಳಿದರು. ನಾನು ಇಷ್ಟು ಹೇಳುತ್ತಿದ್ದೇನೆ. Not less than 50% may be 100% also ಅಂತ ನಾನು ಅಂದೆ. It may be 90% also. It may be 85% also. You say it is only 50%, not less than, not more than – ಅಂತ ಹೇಳಿ ಅವತ್ತು ತೀರ್ಮಾನವಾಗಿರುವುದು. ಅದನ್ನು ಇಂಕ್ಲೂಡ್ ಮಾಡಿದರೆ ಇದು ಪಾಸ್ ಆಗುತ್ತದೆ ಸ್ವಾಮಿ. ಮಿಕ್ಕಿದ್ದರಲ್ಲಿ ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಒಂದು ಸಭೆಯನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಇದ್ದು ಅವರ ಎದುರಿಗೇ ತೀರ್ಮಾನವನ್ನು ತೆಗೆದುಕೊಂಡು ನಾವೆಲ್ಲಾ ಆಚೆ ಬಂದು ಪ್ರೆಸ್‌ನವರಿಗೆ ಹೀಗೆ ತೀರ್ಮಾನ ಆಗಿದೆ ಅಂತ ಹೇಳಿ ಅದೆಲ್ಲಾ ಇತ್ಯರ್ಥವಾಗಿದ್ದರೂ ನೀವು ಬಿಲ್‌ನ್ನು ತರುವಾಗ ಇದನ್ನೇ ಮಾಡುತ್ತೇವೆ ಎಂದರೆ ನಮ್ಮನ್ನು ಏಕೆ ಸಭೆಗೆ ಕರೆಯುತ್ತೀರಿ ? ನೀವು ಅವರನ್ನೇ ಕರೆದುಬಿಡಿ. ಅವರನ್ನೇ ಕೂಡಿಸಿಕೊಂಡು ಅವರೇ ಸರ್ಕಾರ ನಡೆಸಲಿ. ಬಿಲ್‌ನ್ನು ಇಲ್ಲಿ ತರುವುದು ಬೇಡ. ನಿಮ್ಮ ಕಛೇರಿಯಲ್ಲೇ ಇದನ್ನು ಪಾಸ್ ಮಾಡಿಸಿಕೊಂಡು ಬಿಡಿ. ಯಾರ್‍ಯಾರು ಅಧಿಕಾರಿಗಳು ಹೀಗೆ ಸಲಹೆ ಕೊಡುತ್ತಾರೆ ಅವರ ಹತ್ತಿರಾನೇ ಬಿಲ್ ಪಾಸ್ ಮಾಡಿಸಿಕೊಂಡು ಬಿಡಿ. ಅದು ಶಾಸನ ಅಲ್ಲಿಯೇ ಆಗಿಬಿಡಲಿ. ಗವರ್ನರ್ ಅವರಿಗೆ ನಾವೆಲ್ಲರೂ ವಿನಂತಿ ಮಾಡುತ್ತೇವೆ. ನಾವೆಲ್ಲಾ ಶಾಸಕರು ದಡ್ಡರಿದ್ದೇವೆ, ಶಾಸನಸಭೆಗೆ ಬಿಲ್ ಬರುವುದು ಬೇಡ. ಅವರು ತರುತ್ತಾರೆ, ನೀವು ಅದಕ್ಕೆ ಒಂದು ಸೀಲ್ ಹಾಕಿ ಕಳಿಸಿಬಿಡಿ ಎಂದು ಹೇಳುತ್ತೇವೆ. ನಾನು ನೇರವಾಗಿ ತಮಗೆ ಹೇಳುತ್ತಿದ್ದೇನೆ. ಇದು ನಮ್ಮ ವಿರೋಧಪಕ್ಷಗಳಿಗೆ ಮಾಡಿರುವ ಅವಮಾನ

ಅಂತ ಹೇಳಿ ನಾವು ಭಾವಿಸುತ್ತಿದ್ದೇವೆ. ನಮ್ಮನ್ನು ಕರೆಸಿ ಗಂಟೆಗಟ್ಟಲೆ ಚರ್ಚೆಮಾಡಿ ಒಪ್ಪಿಕೊಂಡು, ನಿನ್ನೆ ಮಾನ್ಯಸಚಿವರು ಚರ್ಚೆಮಾಡಿದಾಗ not less than 50% – ಅಂತ ಇರುವುದನ್ನು ದಯಮಾಡಿ 'not less' – ಎಂಬ ಪದವನ್ನು ತೆಗೆದುಬಿಡಿ ಎಂದು ಅಷ್ಟೇ ನಾವು ಕೇಳಿದ್ದೇವೆ. If it is decided, – ಆ ವಾಲ್ಯುಯೇಶನ್‌ನಲ್ಲಿ 50 ಪರ್ಸೆಂಟ್ ಎಂದು ತೀರ್ಮಾನವಾಗಿದೆ. posh area ಗೆ ಅನ್ಯಾಯ ಆಗುತ್ತದೆ ಎಂದರೆ posh area ಅವನ ವಾಲ್ಯುಯೇಶನ್ ಜಾಸ್ತಿಯಾಗಿಯೇ ಆಗುತ್ತದೆ. ಸ್ಮಾಲ್ ಏರಿಯಾದವನ ವ್ಯಾಲ್ಯುಯೇಶನ್ ಅದಕ್ಕೆ ತಕ್ಕನಾಗಿ ಆಗುತ್ತದೆ. ಈಗ ಹೀಗಿರುವುದು ಜಾಸ್ತಿ ಇದೆ ಅಂತ ನಾವು ವಾದಮಾಡಿ, ತಮ್ಮ ಅನುಮತಿಯ ಮೇಲೆ ನಾವೆಲ್ಲಾ ಅಲ್ಲಿ ಹೋಗಿ ಚರ್ಚೆಮಾಡಿ, ತೀರ್ಮಾನಕ್ಕೆ ಬಂದಿದ್ದರೆ ಮತ್ತೆ ಆ ವಿಷಯವನ್ನು ಬಿಟ್ಟು ಬಿಲ್‌ನ್ನು ತಂದಿದ್ದಾರೆ. ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಶ್ರೀಯುತ ಮಾಧುಸ್ವಾಮಿಯವರು ಹೇಳಿದ್ದು ಒಂದು ಅಂಶ. ಏಕೆಂದರೆ ನಮ್ಮೆಲ್ಲಾ ಪಕ್ಷಗಳ ಪ್ರಮುಖರನ್ನು ಕರೆದು ತಾವು ಚರ್ಚೆಮಾಡಿ ಎಲ್ಲಾ ತೀರ್ಮಾನ ಆಗಿದ್ದರೂ ಕೂಡ ಇಲ್ಲಿ ಅದನ್ನು ತರುವಂತಹ ಸಂದರ್ಭದಲ್ಲಿ ಅದನ್ನು ಬಿಟ್ಟು ನೀವು ಮಾಡುತ್ತಿದ್ದೀರಿ ಎಂದರೆ, ಇದು ನಿಜಕ್ಕೂ ಕೂಡ ಒಂದು ರೀತಿಯಿಂದ ಈ ವಿಧಾನಸಭೆಗೆ ಮಾಡುತ್ತಾ ಇರುವಂತಹ ದ್ರೋಹ ಎಂದು ನಾನು ಹೇಳುವುದುಕ್ಕೆ ಇಚ್ಛೆಪಡುತ್ತೇನೆ. ಎರಡನೇಯದು ಈ ಸಭೆಗೆ ಫ್ಲೋರ್ ಲೀಡರ್ಸ್ ಮಾತ್ರ ಕರೆದಿದ್ದೀರಿ. ಎಲ್ಲರೂ ಬರುವುದಕ್ಕೆ ಆಗಲಿಲ್ಲ. ತುಂಬಾ ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳು ಇದ್ದಂಥ ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನವಾಗಿದೆ. ಅದು ಖಂಡಿತ ಬೇಡ, ಮಂಗಳೂರು ಮತ್ತು ಬೇರೆಬೇರೆ ಕಡೆ 2001ರ ಮುಂಚೆ ಯಾವರೀತಿ ತೆರಿಗೆ ಸಂಗ್ರಹ ಮಾಡಿದ್ದರೋ ಅದೇ ರೀತಿ ಸಂಗ್ರಹವನ್ನು ಇಡೀ ರಾಜ್ಯಕ್ಕೆ ಮಾಡಬೇಕೆಂದು ನಾವು ಮನವಿಯನ್ನು ಮಾಡಿದ್ದೆವು. ಇದನ್ನು ಕೂಡ ಡಬಲ್ ಮಾಡುವ ಪ್ರಯತ್ನವನ್ನು ಮಾಡಿದ್ದೀರಿ. ಇಡೀ ರಾಜ್ಯದ ಜನತೆಗೆ ಅನುಕೂಲವಾಗುವ ದೃಷ್ಟಿಯಿಮದ 2001ರ ಮುಂಚೆ ಹೇಗೆ ಇತ್ತೋ ಆ ಪ್ರಕಾರವೇ ತೆಗೆದುಕೊಳ್ಳುವ ಪ್ರಯತ್ನವನ್ನಾದರೂ ಕೂಡ ಇದರಲ್ಲಿ ಮಾಡಬೇಕೆಂಬ ಮನವಿಯನ್ನು ಮಾಡಿದ್ದೆವು. ಏಕೆಂದರೆ ಆ ಸಭೆಯಲ್ಲಿ ಚರ್ಚೆಮಾಡಿ ತೀರ್ಮಾನವಾಗಿದೆ. 2001ರ ಮುಂಚೆ ಹೇಗಿತ್ತೋ ಆ ದಿಕ್ಕಿನಲ್ಲಾದರೂ ತೆಗೆದುಕೊಳ್ಳುವ ಪ್ರಯತ್ನ ಮಾಡಿ. ಇನ್ನೂ ತೀರಾ ಆಗಲಿಲ್ಲ ಎಂದರೆ ಒಂದೂವರೆ ಪಟ್ಟಿಗಾದರೂ ಬಂದು ನಿಂತರೆ ಸ್ವಲ್ಪ ಹಣ ಕಟ್ಟುವವರಿಗೆ ಅನುಕೂಲವಾಗುತ್ತದೆ. ಏಕೆಂದರೆ ಮೂರು ವರ್ಷದ ಹಣ ಕಟ್ಟಬೇಕು. ಒಂದೇ ಸಲ ಅಷ್ಟೊಂದು ಹಣ ಕಟ್ಟಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ತಾವು ಎಲ್ಲರಿಗೂ ಅನುಕೂಲವಾಗುವ ದಿಕ್ಕಿನಲ್ಲಿ ಕೂಡ ಯೋಚನೆ ಮಾಡಿ ಈ ಬಿಲ್‌ನ್ನು ಸ್ವಲ್ಪ ತಿದ್ದುಪಡಿ ಮಾಡಿ ತೆಗೆದುಕೊಂಡು ಬರಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಸನ್ಮಾನ್ಯ ಅಧ್ಯಕ್ಷರೇ, ಈಗ ಎರೆಡೂವರೆ ಪಟ್ಟು ಇದ್ದದ್ದು ಎರಡು ಪಟ್ಟು ಮಾಡಿದ್ದಾರೆ. ನಾವು ಮಾನ್ಯ ಸಚಿವರ ಜತೆಗೆ ಖಾಸಗಿಯಾಗಿ ಚರ್ಚೆ ಮಾಡಿದಾಗಲೂ ಹೇಳಿದ್ದೇವು. ಈ ಹಳೆಯದು ಮೂರು ವರ್ಷದ್ದು ಬಾಕಿ ಏನು ಇದೆ, ಇದನ್ನು ನೀವು ಎರಡು ಪಟ್ಟು ಮಾಡಬೇಡಿ, ಮುಂದಿನ ವರ್ಷದಿಂದ ಎರಡು ಪಟ್ಟು ಅನ್ನಿ. ಆದರೆ ಮೂರು ವರ್ಷ ಬಾಕಿ ಇದ್ದದ್ದು ಮಾತ್ರ ಅಷ್ಟೇ ತೆಗೆದುಕೊಳ್ಳುವುದು ಮಾಡಬೇಕು. ಇದರೊಳಗೆ ದಯವಿಟ್ಟು

ಪ್ರತಿಷ್ಠೆ ಬೇಡ. ಒಂದು ಪ್ರಾವಿಜೋ ಹಾಕಿ ನೀವು ಮೂರು ವರ್ಷದ್ದು ಹಳೆ ತೆರಿಗೆಯನ್ನು ಬಾಕಿ ಕೊಡಬಹುದು ಅಂತ ಹೇಳಿಬಿಟ್ಟರೆ, ಮುಂದೆ ದುಪ್ಪಟ್ಟು ಆಗಲಿ ಅಥವಾ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಒಳಗೆ ಅವರೇ ಅಸೆಸ್ ಮಾಡುವುದು ಇರುತ್ತದೆ, ಅವರಿಗೆ ಬರುವ ಹಾಗೆ ಆಗಲಿ. ಇದನ್ನು ದಯವಿಟ್ಟು ಮಾನ್ಯ ಸಚಿವರು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ನಮ್ಮ ದುರಾದೃಷ್ಟಕ್ಕೆ ಈ ಫೋರಮ್ ಬಿಟ್ಟರೆ ಬೇರೆ ಸಿಗುತ್ತಿಲ್ಲ. ಈಗ ವಿರೋಧ ಪಕ್ಷದವರಿಗೆ ಫ್ಲೋರ್ ಲೀಡರ್ಸ್ ಮುಖಾಂತರ ಅನುಕೂಲವಾಗುತ್ತದೆ. ಅದಕ್ಕೆ ತಮಗೆ ನಮ್ಮ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅವರು ಎಷ್ಟು ಕಳಕಳಿಯಿಂದ ಕೆಲಸ ಮಾಡುತ್ತಾರೋ, ನಾವು ಸಹಿತ ಅಷ್ಟೇ ಕಳಕಳಿಯಿಂದ ಈ ಕಡೆ ಇದ್ದವರೆಲ್ಲರೂ ಕೂಡ ಮಾಡುತ್ತಿದ್ದೇವೆ. ಅದಕ್ಕೆ ಹಳೆಯದು ಮೂರು ವರ್ಷದ್ದು ದಯವಿಟ್ಟು concede ಮಾಡಲೇಬೇಕೆಂದು ಒತ್ತಾಯವನ್ನು ಮಾಡಿ ಈ ಬಿಲ್‌ನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಕಳೆದ ಮೂರು ವರ್ಷಗಳಿಗೆ ಸಂಬಂಧಪಟ್ಟಿದ್ದನ್ನು ತಾವು ರಿವ್ಯೂ ಮಾಡಬಹುದು. ಬೇರೆ ಬೇರೆ ಕಡೆಗೆ ಹೇಗೆ ತೆರಿಗೆಯನ್ನು ವಿಧಿಸುತ್ತಾರೆ ಮತ್ತು ಎನ್‌ಹ್ಯಾನ್ಸ್ ಮಾಡಿರುವಂಥಾದ್ದು ಹೇಗೆ ಎನ್ನುವುದನ್ನು ತಾವು ಸ್ವಲ್ಪ ರಿವ್ಯೂ ಮಾಡಿದರೆ 1996ರಲ್ಲಿ ಒಂದು ಸಾವಿರ ರೂಪಾಯಿ ಇದ್ದರೆ 2000ಕ್ಕೆ ಎನ್‌ಹ್ಯಾನ್ಸ್ ಆಗದಿದ್ದರೂ ಕೂಡ 20–25 ಪರ್ಸೆಂಟ್ ಮ್ಯಾಕ್ಸಿಮಮ್ ಎನ್‌ಹ್ಯಾನ್ಸ್ ಆಗುವಂಥಾದ್ದು. ಇದು ಸಹಜವಾಗಿ 15–20 ಪರ್ಸೆಂಟ್‌ಗಿಂತ ಜಾಸ್ತಿಯಾಗುವುದಿಲ್ಲ. ಈ 20 ಪರ್ಸೆಂಟ್‌ನದ್ದು ಲೆಕ್ಕ ಹಾಕಿದರೂ ಕೂಡ ಅದು 1200 ರೂಪಾಯಿ ಆಗಿಬಿಡುತ್ತದೆ. ಅಂದರೆ 1996ರಲ್ಲಿ ಒಂದು ಸಾವಿರ ಇದ್ದರೆ 2000ನೇ ಇಸವಿಯಲ್ಲಿದೇ ಅಮೌಂಟ್ 1200 ರೂ. ಆಗುತ್ತದೆ. ಅದೇ 2004ಕ್ಕೆ 20 ಪರ್ಸೆಂಟ್ ಏರಿಸಿದರೆ ಅದು 1440 ರೂಪಾಯಿ ಆಗುತ್ತದೆ. ಈಗ ತಮ್ಮ ಬಿಲ್ ಪ್ರಕಾರ ಒಂದು ಸಾವಿರ ಇದ್ದವರಿಗೆ ಎರಡು ಸಾವಿರ ಕಟ್ಟುವಂತಹ ಸ್ಥಿತಿ ಬರುತ್ತದೆ. ಈ ನಿಟ್ಟಿನಲ್ಲಿ ನಾನು ಮನವಿ ಮಾಡುವಂಥಾದ್ದು ಏನೆಂದರೆ ಅದನ್ನು 50 ಪರ್ಸೆಂಟ್‌ಗೆ ಮಾತ್ರ ಏರಿಸಿದರೆ, ಅಂದರೆ ಆ ರೀತಿಯಲ್ಲಿ ಪ್ರಶೋಶನೇಟ್ ಆಗಿ ಮತ್ತು ರಿಯಲಿಸ್ಟಿಕ್ ಬೇಸಿಸ್‌ನಲ್ಲಿ ಅದನ್ನು ಮಾಡಿದರೆ ಖಂಡಿತವಾಗಿ 1440 ರೂ ಇದ್ದದ್ದು 1500 ರೂ. ತನಕ ಬರುತ್ತದೆ. ಇದಕ್ಕೆ ಯಾರೂ ಆಕ್ಷೇಪಣೆ ಮಾಡಲಿಕ್ಕಿಲ್ಲ ಎಂದು ನನ್ ಅನಿಸಿಕೆ ಇದೆ. ಅದು ಬಿಟ್ಟು ಏಕ್‌ದಂ ಎರಡು ಪಟ್ಟು ಅಂತ ಹೇಳುವುದು ಸರಿಯಲ್ಲ. ಒಂದು ರಿಯಲಿಸ್ಟಿಕ್ ಬೇಸಿಸ್ ಮೇಲೆ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇದೆ. ಮತ್ತೆ ಸ್ಟಾಂಪ್ ಆಕ್ಟ್‌ನಲ್ಲಿ ಕೂಡ ಸ್ಥಳೀಯ ಆಡಳಿತಕ್ಕೆ ಅವಕಾಶ ಕೊಡಬೇಕೆಂದು ಯಾವ ಚಿಂತನೆ ಇತ್ತೋ ಅದನ್ನು ಬಿಟ್ಟು ಈಗ ಬೇರೆ ರೀತಿಯಲ್ಲಿ ಚಿಂತನೆ ಮಾಡಿದರೂ ಅದೂಕೂಡ ಇಂಪ್ಲಿಮೆಂಟ್ ಆಗಿಲ್ಲ. ನಿನ್ನೆ ಪ್ರಮುಖರಿಂದ ನನ್ನ ಗಮನಕ್ಕೆ ಬಂದಿತು. ಈ ಆಕ್ಟ್ ಪ್ರಕಾರ ರಿಜಿಸ್ಟ್ರೇಶನ್ ವ್ಯಾಲ್ಯು ಎಷ್ಟಿದೆ ಅದರ 50 ಪರ್ಸೆಂಟ್‌ಗೆ ತೆರಿಗೆ ವಿಧಿಸುವುದು ಅಂತ ಹೇಳಿ ಇದೆ. ಈ 50 ಪರ್ಸೆಂಟ್ ಎನ್ನುವಂಥಾದ್ದನ್ನು ತಾವು ಪಕ್ಕಾ ಮಾಡುವುದು ಅವಶ್ಯಕತೆ ಇದೆ. ಅದು ಇಲ್ಲದಿದ್ದರೆ ಹೊಸ ಸಮಸ್ಯೆಗಳು ಬರುತ್ತವೆ ಎನ್ನುವುದನ್ನು ಕೂಡ ತಮ್ಮ ಗಮನಕ್ಕೆ ತರಬೇಕೆಂದು ನಾನು ಇಚ್ಛೆಪಡುತ್ತೇನೆ. ನಾನು ಇನ್ನೊಂದು ಕ್ಲಾರಿಫಿಕೇಶನ್‌ನ್ನು ಕೇಳುತ್ತೇನೆ. ಅದು ಏನೆಂದರೆ ಖಾಲಿ ಜಾಗದ ಮೇಲೆ ತೆರಿಗೆಯನ್ನು ವಿಧಿಸಬಾರದು ಎಂದು ನಮ್ಮೆಲ್ಲರ ಬೇಡಿಕೆ ಇತ್ತು. ಈಗ

ಮನೆಯ ಸುತ್ತಲೂ ಇರುವಂತಹ ಖಾಲಿ ಜಾಗವನ್ನು ತಾವು ಏನು ಮೆನ್‌ಶನ್ ಮಾಡಿದ್ದೀರಿ, ಮನೆಯ ಸುತ್ತಲೂ ಇರುವಂತಹ ಎಷ್ಟು ಖಾಲಿ ಜಾಗದ ತನಕ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡುವ ಅವಶ್ಯಕತೆ ಇದೆ. ಆ ಪಾಯಿಂಟ್‌ನ್ನು ತಾವು ಕ್ಲಿಯರ್ ಪ್ಲಾಡಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸಾವಧಾನವಾಗಿ ನಮ್ಮನ್ನೆಲ್ಲಾ ಕರೆದರು. ಅಂದರೆ, ಬಹಳ ಒಳ್ಳೆಯ ಉದ್ದೇಶದಿಂದ ನಮ್ಮನ್ನು ಕರೆದು ಮಾತನಾಡಿ ಒಂದು ಒಪ್ಪಂದಕ್ಕೆ ಬರೋಣ ಆಮೇಲೆ ನಾವು ಮಸೂದೆಯನ್ನು ಮಂಡಿಸೋಣ ಎಂದಾಗಿತ್ತು. ಆದರೆ, ಈಗ ಇದು ಒಪ್ಪಂದ ಮುರಿದಹಾಗೆ ಆಗಿದೆ. ಎಲ್ಲೋ ಒಂದು ಕಡೆ ಇದು ಆಗಬಾರದಾಗಿತ್ತು. ಸಾಮಾನ್ಯವಾಗಿ ನಿಮ್ಮ ಅಭಿಪ್ರಾಯವನ್ನು ಅವತ್ತು ನಾನು ಒಪ್ಪಿದೆ. ಒಂದು ಒಟ್ಟಾರೆ ಅಭಿಪ್ರಾಯ, ಸದನದ ಅಭಿಪ್ರಾಯ ಮನ್ನಿಸೋಣ, ಎಲ್ಲಾ ವಿರೋಧ ಪಕ್ಷದ ಮುಖಂಡರುಗಳು ಈ ಕಡೆಯವರನ್ನೆಲ್ಲಾ ಕರೆದು ಮಾತುಕತೆಯಾಡಬೇಕೆಂದು ಹೇಳಿ ತೀರ್ಮಾನ ಮಾಡಿ ಸವಿಸ್ತಾರವಾಗಿ ಮಾತನಾಡಿ, ಇದನ್ನು ಯಾವರೀತಿ ತರಬೇಕೆನ್ನುವುದು ಆಯಿತು. ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ಷರತ್ತು" ಮುನಿಸಿಪಲ್ ಕೌನ್ಸಿಲ್ ಮೂರು ವರ್ಷಗಳಲ್ಲಿ ಒಂದು ಸಲ ಶೇಕಡ 30 ರಷ್ಟರವರೆಗೆ ಎಂದಿದೆ. ಒಂದೇಸಾರಿ 30 ರಷ್ಟರವರೆಗೆ ಎಂದು ನಾವು ಅಲ್ಲಿ ಹೇಳಲಿಲ್ಲ. ಕನಿಷ್ಟ 15, ಆಮೇಲೆ 30 ಅಂದರೆ, ಯಾವ ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಸಂಪನ್ಮೂಲಗಳನ್ನು ಜಾಸ್ತಿ ಮಾಡಿ ಕೊಳ್ಳಬಹುದು. ಅವರಿಗೇ ನಾವು ಅಧಿಕಾರ ಕೊಡತಕ್ಕಂಥಾದ್ದು. ಇಲ್ಲಿ ನಾವು ಆ ಹದಿನೈದು ಬಿಟ್ಟುಬಿಟ್ಟಿದ್ದೇವೆ. 30 ಎಂದು ನಾವು ಮಾಡಿದ್ದೇವೆ. ಅದ್ದರಿಂದ, ಇದು ಸ್ವಲ್ಪ ಗೊಂದಲದಲ್ಲಿದೆ. ಇವೆಲ್ಲವನ್ನೂ ಸರಿಪಡಿಸಿ ಮಂಡಿಸುವುದಾದರೆ, ನಿಜವಾಗಿಯೂ ನಾವೆಲ್ಲಾ ಸ್ವಾಗತ ಮಾಡುತ್ತೇವೆ. ಮೊದಲನೆಯದಾಗಿ, ಪ್ರಾಮಾಣಿಕವಾಗಿ ಹೇಳುವುದಾದರೆ, ನಾವು ಎಲ್ಲೋ ಒಂದುಕಡೆ, ಒಂದು ವಂಚನೆ ಮಾಡುತ್ತಾ ಇದ್ದೇವೆ, ಖಾಲಿ ಜಾಗ, ನಾವು ಮನೆ ಕಟ್ಟಿರುವುದಿಲ್ಲ. ಪಕ್ಕದಲ್ಲಿ ಜಾಗ ಇರುತ್ತೆ. ಈಗ ಖಾಲಿ ಜಾಗಕ್ಕೂ ನಾವು ತೆರಿಗೆ ಕೊಡಬೇಕು. ಬೇರೆ ಮಾತು ಇಲ್ಲವೇ ಇಲ್ಲ. ಅವತ್ತು ಮಾತುಕತೆಯಲ್ಲಿ ಏನೋ ಒಂದು ತೀರ್ಮಾನಕ್ಕೆ ಬಂತು. ಹಣ ಇಲ್ಲದೇ ಇರುವವನು, ಮನೆ ಕಟ್ಟುವುದಕ್ಕೆ ಶಕ್ತಿ ಇಲ್ಲದೇ ಇರುವವರು ಜಾಗ ಬಿಟ್ಟುಕೊಂಡಿರುತ್ತಾರೆ. ಎಲ್ಲೋ ಒಂದು ಮೂಲೆಯಲ್ಲಿ ಸಣ್ಣ ಮನೆ ಕಟ್ಟಿಕೊಂಡಿರುತ್ತಾರೆ. ಮಿಕ್ಕ ಖಾಲಿ ಇದ್ದರೆ, ಅದಕ್ಕೂ ತೆರಿಗೆ ಹಾಕುವುದಾಗಿ ಹೋಗುವುದಿದೆಯಲ್ಲಾ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದಕ್ಕಿಂತ ಮತ್ತೊಂದು ಇಲ್ಲ. ಆದ್ದರಿಂದ, ಈ ಬಗ್ಗೆಯೂ ನಾವು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಮಾನ್ಯ ಸಚಿವರು ಯಾವರೀತಿ ಇದರ ಬಗ್ಗೆ ಈ ಸದನಕ್ಕೆ ಮನವರಿಕೆ ಮಾಡುತ್ತಾರೆಂಬುದನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ) : ಅಧ್ಯಕ್ಷರೇ, ಎರಡು ಮೂರು ವಿಷಯದಲ್ಲಿ ಮಾತ್ರ ನಮ್ಮದು ತಕರಾರು ಇರುವಂಥಾದ್ದು. 15 ರಿಂದ 30 ಶೇಕಡ ಹಾಕುವಂಥಾದ್ದು. ಇದನ್ನು ಮುನಿಸಿಪಾಲಿಟಿಯವರಿಗೆ ಅಧಿಕಾರ ಕೊಡುವಂಥಾದ್ದು. ಮತ್ತೆ ಇದರ ಪ್ರಕಾರ ಶೇಕಡ 50 ಬರಲಿಲ್ಲ. 100 ಪರ್ಸೆಂಟ್ ಹಾಕುವಂಥಾದ್ದು ಆಯಿತು. ಅವರಿಗೆ 50 ರಿಂದ 100 ಎಂದೂ ಹಾಕಲಿಲ್ಲ. ಅಥವಾ 50 ಎಂದೂ ಹಾಕಲಿಲ್ಲ. ಹಂಡ್ರಡ್ ಪರ್ಸೆಂಟ್ ಹಾಕುವ ಪರಿಸ್ಥಿತಿ ಬಂದಿದೆ. ಅದಕ್ಕೆ ತಾವು ವಿವರಣೆ ಕೊಡಬೇಕು. ಏಕೆಂದರೆ ಇದರಲ್ಲಿ ಕೊಡದೇ ಇದ್ದರೆ, ಹಂಡ್ರಡ್ ಪರ್ಸೆಂಟ್ ಹಾಕುತ್ತಾರೆ. ಯಾರೂ

ಕಮ್ಮಿ ಹಾಕುವುದಿಲ್ಲ. ಏಕೆಂದರೆ, ಆದಾಯ ಕಮ್ಮಿಯಾಗುತ್ತದೆ ಎನ್ನುವ ಒಂದೇ ಭಾವನೆಯಿಂದ ಅಲ್ಲಿ ಜೀಫ್ ಆಫೀಸರ್ಸ್ ಇರುತ್ತಾರೆ. ಬರೀ ಮೆಂಬರ್ಸ್ ಇರುವುದಿಲ್ಲ. ಇನ್ನೊಂದು ಚರ್ಚೆಯಾಗಿತ್ತು. ಏನೆಂದರೆ, ಈಗಾಗಲೇ ತೆರಿಗೆಯನ್ನು ಕಟ್ಟಿದವರು ಅವರಿಗೆ ಬಾಕಿ ಅಡ್ಜಸ್ಟ್ ಮಾಡಲಿಕ್ಕೆ ಒಪ್ಪಿದ್ದಿರಿ. ಇಲ್ಲಿ ಅದನ್ನು ಹಾಕುವಂಥಾದ್ದು. ಇಲ್ಲಿ ಕೆ.ಪಿ.ಟಿ.ಸಿ.ಎಲ್. ನವರೂ ಹಾಗೆಯೇ ಮಾಡಿದ್ದಾರೆ. ಕಟ್ಟಿದವರಿಗೆ ವಿನಾಯಿತಿ ಇಲ್ಲ, ಆದರೆ, ಇನ್ನು ಮುಂದೆ ಯಾರೂ ಕಟ್ಟುವುದೇ ಇಲ್ಲ. ಎಲ್ಲಾದರೂ ಒಂದುದಿವಸ ವಿನಾಯಿತಿ ಕೊಡುತ್ತಾರೆಂದು ಕಾಯುವಂಥ ಪರಿಸ್ಥಿತಿ ನಿರ್ಮಾಣ ಆಗಬಾರದು. ದಯವಿಟ್ಟು ಈಗಾಗಲೇ ಕಟ್ಟಿದವರಿಗೆ ಒಂದೇ ವರ್ಷದಲ್ಲಿ ಅದನ್ನು ಅಡ್ಜಸ್ಟ್ ಮಾಡಬೇಕೆಂದು ಕೇಳುವುದಿಲ್ಲ. ಆಯಾ ಮುನಿಸಿ ಪಾಲಿಟಿಯವರು ಯಾವರೀತಿಯಲ್ಲಿ ಅದನ್ನು ಅಡ್ಜಸ್ಟ್ ಮಾಡಲಿಕ್ಕಾಗುತ್ತದೋ ಆ ರೀತಿ ಮಾಡುವಂತೆ ಇದರಲ್ಲಿ ತರಬೇಕಾಗುತ್ತದೆ. ಆದ್ದರಿಂದ, ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕೆಂದು ಮಾನ್ಯ ಸಚಿವರ ಹತ್ತಿರ ತಮ್ಮ ಮುಖೇನ ಕೇಳುತ್ತಿದ್ದೇನೆ.

* **ಶ್ರೀ ಎ. ಪಾಪರೆಡ್ಡಿ (ರಾಯಚೂರು)** : ಮಾನ್ಯ ಅಧ್ಯಕ್ಷರೇ, ನಮ್ಮ ರಾಯಚೂರು ನಗರಸಭೆಯಲ್ಲಿ 50 ಪರ್ಸೆಂಟ್ ಜನರು ಕಟ್ಟಿದ್ದಾರೆ. ಈ ರೀತಿ ಕಟ್ಟಿದಂಥ ಜನಕ್ಕೆ ಏನಾಗಬೇಕು ? ಕಳೆದ ಮೂರು ವರ್ಷಗಳಿಂದ ಸತತವಾಗಿ ಕಟ್ಟುತ್ತಾ ಇದ್ದಾರೆ. ಜನರನ್ನು ಬೆದರಿಸಿ, ಅಂಜಿಸಿ ಅಧಿಕಾರಿಗಳು ಹಣ ಕಟ್ಟಿಸಿಕೊಂಡಿದ್ದಾರೆ. ಇವತ್ತು ಅವರಿಗೂ ಅನುಕೂಲ ಆಗಬೇಕಾಗಿದೆ. ಈ ಕಾನೂನು ಬರುವುದರಿಂದ, ಕಟ್ಟಿದಂಥ ಜನರಿಗೆ ಏನು ಮಾಡಬೇಕು ? ನಗರ ಸಭೆಗಳು ಈ ಹಣವನ್ನು ಮುಂದಿನ ವರ್ಷಕ್ಕೆ ಅಡ್ಜಸ್ಟ್ ಮಾಡುತ್ತದೆಯೇ ? ಇದನ್ನೂ ಇದರಲ್ಲಿ ತೋರಿಸ ಬೇಕಾಗುತ್ತದೆ. ಇದನ್ನು ತೋರಿಸಿ, ಈ ಕಾನೂನು ಪಾಸ್ ಮಾಡಬೇಕಾಗುತ್ತದೆ. ಆ ಕಾರಣದಿಂದ, ಕಟ್ಟಿದಂಥ ಜನರಿಗೂ ತೊಂದರೆಯಾಗಬಾರದು. ಮುಂದೆ ಕಟ್ಟುವ ಜನರಿಗೂ ತೊಂದರೆಯಾಗಬಾರದು. ಮಾನ್ಯ ಸದಸ್ಯರು ಹೇಳಿದ ಪ್ರಕಾರ 1.5 ಪರ್ಸೆಂಟ್ ಒಂದೂವರೆ ಪರ್ಸೆಂಟ್ ಹೆಚ್ಚಿಗೆಯಾದರೆ ಅನುಕೂಲವಾಗುತ್ತದೆ. ಆ ಕಾರಣದಿಂದ ಎಲ್ಲಾ ನಾಗರೀಕರಿಗೆ ಒಳ್ಳೆಯದಾಗಬೇಕಾದರೆ ಒಂದೂವರೆ ಪರ್ಸೆಂಟ್ ಹೆಚ್ಚಿಗೆ ಆಗಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಅಧ್ಯಕ್ಷರೇ, ಈಗಾಗಲೇ ವಿಷಯಗಳು ಪಸ್ತಾಪವಾಗಿವೆ. ಇದರಲ್ಲಿ ಬಹಳ ಸಣ್ಣ ಸಣ್ಣದು, ಇದನ್ನು ಕಾನೂನಿನಲ್ಲಿ ನೋಡುವುದಕ್ಕಾದರೂ ಇದನ್ನು ಗಮನಿಸಬೇಕು ಎಂದು ನಾನು ಅಂದುಕೊಳ್ಳುತ್ತೇನೆ. ಇದರಿಂದ, ನಮಗೇ ಸ್ಪಷ್ಟವಾಗುತ್ತೆ. ಆಮೇಲೆ, ಅಲ್ಲಿ ಇಂಟರ್‌ಪ್ರಿಟೇಷನ್ ಮಾಡುವಾಗ ಅದರೊಳಗೆ ಸ್ಪಷ್ಟತೆ ಇಲ್ಲವೆಂದು ಆಗಬಾರದು. ಅದಕ್ಕಾಗಿ, ಸರ್ಕಾರ ಮುಂದೆ ಆದೇಶವನ್ನು ಹೊರಡಿಸುವಾಗ, ಇದರೊಳಗೆ ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯುಳ್ಳ ಪುರಸಭೆಗಳಲ್ಲಿ, ಖಾಲಿ ಭೂಮಿಯಲ್ಲಿ ಸಂಬಂಧಪಟ್ಟ ತೆರಿಗೆ ಪೂರ್ಣ ವಿನಾಯಿತಿ ಎಂದು ಮಾಡಿದ್ದಾರೆ. ಖಾಲಿ ಜಾಗಕ್ಕೆ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಕಡೆಗಳಲ್ಲಿ ವಿನಾಯಿತಿ ಕೊಟ್ಟಿರುವುದು ಸ್ವಾಗತಾರ್ಹವಾದಂಥಾದ್ದು. ಇದರೊಳಗೆ, ನಗರ ಸಭೆ ಮತ್ತು ಪಟ್ಟಣ ಪಂಚಾಯ್ತಿಗಳು ಸೇರಿಬಿಟ್ಟರೆ ಒಳ್ಳೆಯದು. ಮುನಿಸಿಪಲ್ ಅಕ್ಟ್‌ನ ಹಿನ್ನೆಲೆಯಲ್ಲಿ

---

* ಈ ಭಾಷಣವನ್ನು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಮಾಡಿರುವುದು ನಮಗೆ ಅರ್ಥವಾಗುತ್ತದೆ. ಆದರೆ, ಅಲ್ಟಿಮೇಟ ಚೀಫ್ ಆಫೀಸರ್ ಹತ್ತಿರ ಹೋದಾಗ, ಮುನಿಸಿಪಾಲಿಟಿಗಳಲ್ಲಿ ಅಥವಾ ಟೌನ್ ಪಂಚಾಯ್ತಿಗಳಲ್ಲಿ, ಇದರೊಳಗೆ ಪುರಸಭೆ ಅಷ್ಟೇ ಇದೆ, ನಗರ ಸಭೆ, ಪಟ್ಟಣ ಪಂಚಾಯ್ತಿಗಳಿಗೆ ಏನೂ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ, ಆದೇಶದಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯ್ತಿ ಬರುವಂತೆ ಆಗಬೇಕು. ಇವತ್ತು ಅನೇಕ ಸಂಘ ಸಂಸ್ಥೆಗಳು ಹೋರಾಟ ಮಾಡಿದ್ದಾರೆ. ಇದು ಮಂತ್ರಿಗಳಿಗೂ ಗೊತ್ತಿದೆ. ಮಂತ್ರಿಗಳ ಈ ಪ್ರಯತ್ನವನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ, ನಮ್ಮ ಶ್ರೀಯುತ ಕೆ.ಎಸ್. ಈಶ್ವರಪ್ಪನವರು ಈ ಸದನದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದಾಗ ತಾವು ಅದನ್ನು ಗಂಭೀರವಾಗಿ ಪರಿಗಣಿಸಿ ನಿರಂತರವಾಗಿ ವಿರೋಧ ಪಕ್ಷದವರ ಜೊತೆ ಮತ್ತು ತಮ್ಮ ಪಕ್ಷದ ಶಾಸಕರ ಜೊತೆ ಚರ್ಚೆಯನ್ನು ಮಾಡುತ್ತಾ ಇದ್ದೀರಿ. ಒಂದು ಪರಿವರ್ತನೆಯನ್ನು ತರಬೇಕು, ಜನಕ್ಕೆ ಅನುಕೂಲ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಯೋಚನೆ ಮಾಡುತ್ತಾ ಇದ್ದಾರೆ. ಮೊನ್ನೆ ಫ್ಲೋರ್ ಲೀಡರ್ಸ್ ಮೀಟಿಂಗ್ ಆದನಂತರವೂ, ಈ ತಿದ್ದುಪಡಿ ತಂದಿರುವುದರಲ್ಲಿ ಮತ್ತೆ 50 ಪರ್ಸೆಂಟ್‌ಗಿಂತ 100 ಪರ್ಸೆಂಟ್ ಮಾಡುವತನಕ ಮಾಡಿಕೊಂಡಿರುವುದು ತಪ್ಪ, ಹಾಗಾಗಿ, ಇಷ್ಟೆಲ್ಲಾ ಪ್ರಯತ್ನಗಳು ನಡೆದಿದೆ. ಈ ಹಿನ್ನೆಲೆಯಲ್ಲಿ ಇದನ್ನು ತಾವು ಗಮನಿಸಿ, 50ಕ್ಕಿಂತ ಹೆಚ್ಚು ಆಗದೇ ಇರುವುದಕ್ಕೆ ಬೇಕಾದಂಥ ಸೂಕ್ತ ಮಾಹಿತಿಯನ್ನು ಕೊಡಬೇಕು ಮತ್ತು ವಿವಿಧ ಸಂಘಸಂಸ್ಥೆಗಳವರು ಯಾರು ಹೋರಾಟ ಮಾಡಿದವರಿದ್ದಾರೆ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನವೂ ಆಗಬೇಕು. ಇದರ ಬಗ್ಗೆ ರಾಜ್ಯದಲ್ಲಿ ಬಹಳ ದೊಡ್ಡ ಹೋರಾಟ ಆಗಿದೆ. ಹಾಗಾಗಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇಹೋದರೆ, ನಾವು ಮಾಡಿರುವಂಥ ಕಾನೂನಿಗೆ ಮತ್ತೆ ಹೋರಾಟ ಮಾಡುವುದಕ್ಕೆ ಅವಕಾಶ, ಅನುಕೂಲ ಮಾಡಿಕೊಡುವಂಥ ಸಂದರ್ಭಗಳು ಬರುತ್ತೆ. ಹಾಗಾಗಿ, ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಆಗಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಅಸ್ತಿ ತೆರಿಗೆಗೆ ಸಂಬಂಧಪಟ್ಟಹಾಗೆ ಈ ಹಿಂದೆ, ನಾನು ಪ್ರತಿನಿಧಿಸಿದ ಕ್ಷೇತ್ರ ಹಾಗೂ ಈ ಬೆಂಗಳೂರು ನಗರದಲ್ಲಿ ಮೌಲ್ಯಾಧಾರಿತ ತೆರಿಗೆ ಪದ್ಧತಿ ಬಂದಾಗ ಹಲವಾರು ಸಂಘಟನೆಗಳೂ ಹಾಗೂ ವಾಣಿಜ್ಯ ಸಂಘಟನೆಗಳು ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಯಿತು. ಇದರ ಬಗ್ಗೆ ವಿರೋಧ ವ್ಯಕ್ತವಾಯಿತು. ಇದರಲ್ಲಿ ಯಾವುದೇ ರೀತಿಯ ವೈಜ್ಞಾನಿಕ ಬೇಸಿಸ್ ಇಲ್ಲದೇ ಏಕಾಏಕಿ ಮಾಡಿದ್ದಾರೆ ಅನ್ನತಕ್ಕಂಥಾದ್ದು. ಇವತ್ತು ನಮ್ಮ ಸರ್ಕಾರ, ಅದನ್ನೆಲ್ಲಾ ಪರಿಗಣಿಸಿ ವಿಶ್ಲೇಷಣೆ ಮಾಡಿ, ಹಲವಾರು ಸುಧಾರಣೆಗಳನ್ನು ಮತ್ತು ಕಡಿಮೆ ಮಾಡಿತರಕ್ಕಂಥಾದ್ದು ನಿಜವಾಗಿಯೂ ಸ್ವಾಗತಾರ್ಹ. ಆದರೆ, ಹಿಂದೆ ಇದ್ದಂಥಾದ್ದು, ಇವತ್ತು ತಮಗೆ ಗೊತ್ತಿದೆ ಒಂದು ಪುರಸಭೆಯಾಗಲೀ, ನಗರ ಸಭೆಯಾಗಲೀ, ಮಹಾನಗರ ಪಾಲಿಕೆಗಳಾಗಲೀ ಇವತ್ತು ಬಹುತೇಕ ವರಮಾನ ಇರುವುದಕ್ಕೆ ಆಸ್ತಿ ತೆರಿಗೆಯೇ ಮೂಲ. ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ, ನಾನು ತೆರಿಗೆ ಮತ್ತು ಆರ್ಥಿಕ ಸ್ಥಾಮಿ ಸಮಿತಿ ಅಧ್ಯಕ್ಷನಾಗಿದ್ದಾಗ ನಮ್ಮ ಅವಧಿಯಲ್ಲಿ ಸ್ವಯಂ ಘೋಷಿತ ತೆರಿಗೆ ಸ್ಕೀಮನ್ನು ತಂದಾಗ ಬಹಳಷ್ಟು ವಾಲಂಟರಿಯಾಗಿ ಜನ ಕಟ್ಟಿ ಎರಡೂವರೆ ಪಟ್ಟಿನಷ್ಟು ಬೆಂಗಳೂರಿನ ವರಮಾನ ಕಂದಾಯದ ಮುಖೇನ ಜಾಸ್ತಿಯಾಯಿತು. ಇವತ್ತು ಒಂದು ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಂದ

ಬಯಸುವುದೇನೆಂದರೆ, ಈ ಸ್ವಯಂ ಘೋಷಿತ ಸ್ಕೀಮ್ ಎನ್ನುವುದನ್ನು ಒಂದು ನಿಗದಿತ ವೇಳೆಯಲ್ಲಿ ಮಾಡಿ, ಕಡ್ಡಾಯವಾಗಿ ಪುರಸಭೆಯಾಗಲೀ ಅಥವಾ ಮಹಾನಗರ ಪಾಲಿಕೆಯಾಗಲೀ ಕಾನೂನು ಅಳವಡಿಸಿ ಗ್ರಾಹಕರಿಗೆ ಅಥವಾ ಕಂದಾಯ ಪಾವತಿದಾರರಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಎರಡನೆಯದಾಗಿ, ಪುಟ–7 ರಲ್ಲಿ ಪುರಸಭೆಗಳ ವ್ಯಾಪ್ತಿಯಲ್ಲಿ ಎಲ್ಲಾ ವರ್ಗದ ಕಟ್ಟಡಗಳ ಸುತ್ತಲಿನ ಖಾಲಿ ಭೂಮಿಯ ತೆರಿಗೆ ವಿನಾಯಿತಿ ನೀಡುವುದು ಎನ್ನತಕ್ಕಂಥಾದ್ದು. ಒಂದು ನಾನು ಒಪ್ಪುತ್ತೇನೆ. ಮಂಗಳೂರು ನಗರದಲ್ಲಿ ಒಂದು ಸಣ್ಣ ಮನೆ ಇದ್ದರೆ, ಮನೆಯ ಸುತ್ತಮುತ್ತ ಒಂದು ಎಕರೆ ಖಾಲಿ ಜಾಗ ಇರುತ್ತದೆ. ಅದೇ ಬೆಂಗಳೂರು ನಗರದಲ್ಲಿ, ಬೆಂಗಳೂರು ಅರಮನೆ ಇದೆ. ಸುತ್ತಲೂ ಎಕರೆಗಟ್ಟಲೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂಥಾದ್ದು ಇದೆ. ಇವತ್ತು ಅದರ ಬಗ್ಗೆ ಸ್ಪಷ್ಟೀಕರಣ ಆಗಬೇಕು. ಇದರ ಬಗ್ಗೆ ಏನಾದರೂ ಇತಿಮಿತಿ ಇದೆಯೇ ? ಬಹಶಃ ಗ್ರಾಮೀಣ ಪ್ರದೇಶಗಳಲ್ಲಿ ಬೆಲೆ ಬರದೇ ಇರಬಹುದು. ನಗರ ಪ್ರದೇಶಗಳಲ್ಲಿ ಇದು ಬಹಳಷ್ಟುಗೊಂದಲ ಆಗುತ್ತದೆ. ಉದಾಹರಣೆಗೆ, ಕೋರಮಂಗಲದಲ್ಲಿ ಬಿ.ಡಿ.ಎ. ಖಾಲಿ ಸೈಟ್ ಇದ್ದರೆ ಆ ಗ್ರಾಹಕ ಐದು ಸಾವಿರ ರೂಪಾಯಿ...

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ಲಕ್ಷ ಜನಸಂಖ್ಯೆಗಿಂತ ಜಾಸ್ತಿ ಇರತಕ್ಕ ನಗರಗಳಿಗೆ ಇದು ಅನ್ವಯವಾಗುವುದಿಲ್ಲ. ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಕಡೆಗಳಿಗೆ ವಿನಾಯಿತಿ ಮಾಡಿರುವುದು.

ಶ್ರೀ ನೆ.ಲ. ನರೇಂದ್ರಬಾಬು : ಬೆಂಗಳೂರು ನಗರದಲ್ಲಿ ಬಹಶಃ ನನ್ನ ಕ್ಷೇತ್ರದಲ್ಲೇ, ಸನ್ಮಾನ್ಯ ವಾಟಾಳ್ ನಾಗರಾಜರಿಗೆ ಗೊತ್ತು. ಕಾರ್ಡ್ ರೋಡಿನಲ್ಲಿ ನಿವೃತ್ತಿ ಯಾಗಿರತಕ್ಕಂಥವರು 90–45ರ ಸೈಟಿನಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಂಡು ಇದ್ದಾರೆ. ಅವರು ಹೇಳುತ್ತಾರೆ, ನನಗೆ ಪೆನ್‌ಷನ್‌ನಲ್ಲಿ ಬರತಕ್ಕಂಥಾದ್ದು ಇಷ್ಟು, ಇದರಲ್ಲಿ ನಾನು ಹೇಗೆ ಪೂರ್ತಿಜಾಗದಲ್ಲಿ ಮನೆ ಕಟ್ಟುವುದಕ್ಕಾಗುತ್ತದೆ. ನಾನು ಯಾವುದೋ ಒಂದು ವಾಣಿಜ್ಯ ಉದ್ದೇಶಕ್ಕೆ ಮಾಡಿಲ್ಲ ಎಂದು ಹೇಳುತ್ತಾರೆ. ಅಂಥವರ ಗತಿ ಏನಾಗಬೇಕು ? ಮಲ್ಲೇಶ್ವರಂನಲ್ಲಿ ಕಾಂಪ್ಲೆಕ್ಸ್ ಬಂದಿರುವುದು ನಿಜ, ಬಹು ಮಹಡಿ ಕಟ್ಟಡಗಳು ಬಂದಿರುವುದು ನಿಜ. ಆದರೆ, ಸಣ್ಣದಾಗಿ ಮನೆಕಟ್ಟಿಕೊಂಡು ಪೂರ್ವಾರ್ಜಿತ ಆಸ್ತಿ ಇಟ್ಟು ಕೊಂಡಿರುವವರ ಗತಿ ಏನಾಗಬೇಕು ? ಏಕೆ ಈ ತಾರತಮ್ಯ ? ನೀವು ಒಂದು ಲಕ್ಷ ಜನಸಂಖ್ಯೆ ತೋರಿಸಿದ್ದೀರಿ. ಆದರೆ, ಇದರ ಬಗ್ಗೆ ದಯವಿಟ್ಟು ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಂಡು ಈ ರೆವಿನ್ಯೂ ರಾಜ್ ಆಗತಕ್ಕಂಥಾದ್ದಕ್ಕೆ ಅವಕಾಶ ಕೊಡಬಾರದು. ಅದಕ್ಕೋಸ್ಕರ ಸ್ವಯಂ ಘೋಷಿತ ಆಸ್ತಿ ತೆರಿಗೆ ಸ್ಕೀಮ್ ಎನ್ನುವುದೇನಿದೆ, ಇದನ್ನು ಕಡ್ಡಾಯವಾಗಿ ಕಾನೂನು ರೀತಿಯಲ್ಲಿ ಒಬ್ಬ ಗ್ರಾಹಕನಿಗೆ ಅವಕಾಶ ಕೊಟ್ಟರೆ ಇವತ್ತು ಶೋಷಣೆ ಅಥವಾ ಯಾವುದೆ ರೀತಿಯಾದ ತೊಂದರೆ ಅನುಭವಿಸುವುದನ್ನು ತಪ್ಪಿಸಲಿಕ್ಕೆ ಸಾಧ್ಯ ಇದೆ. ಮತ್ತೆ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ಬಾಕಿ ಇರತಕ್ಕಂಥ ತೆರಿಗೆ ಪಾವತಿಗೆ ಸಂಬಂಧಪಟ್ಟ ಹಾಗೆ ಈ ಹಿಂದೆ ಪಾವತಿ ಮಾಡುತ್ತಿದ್ದ ವ್ಯವಸ್ಥೆಯು ಯಾವ ಬೇಸಿಸ್ ಮೇಲೆ ಇತ್ತು ಅದನ್ನು ಮುಂದುವರಿಸಿ, ಮುಂದಿನ ಚಾಲ್ತಿ ವರ್ಷದಲ್ಲಿ ಅದನ್ನು ಅನುಷ್ಟಾನಕ್ಕೆ ಕೊಡಬೇಕೆಂದು ನಾನು ತಮ್ಮ ಮುಖೇನ ಮನವಿ ಮಾಡಿಕೊಂಡು ಈ ಮಸೂದೆಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ನಾನು ಈ ಸದನಕ್ಕೆ ಮಸೂದೆಯನ್ನು ತರುವುದಕ್ಕಿಂತ ಮುಂಚೆ ಎಲ್ಲಾ ಪಕ್ಷದ ನಾಯಕರನ್ನು ಮತ್ತು ಇತರೇ ಸದಸ್ಯರನ್ನು ಕರೆಸಿ ಪರ್ಯಾಲೋಚನೆ ಮಾಡಿ, ಆ ಪರ್ಯಾಲೋಚನೆ ಪ್ರಕಾರ ಮತ್ತು ಆ ಪ್ರೊಸೀಡಿಂಗ್ಸ್ ಪ್ರಕಾರ ಒಂದು ಗುಂಜು ಸಹಿತ ನಾವು ಅಲ್ಲಿ ಇಲ್ಲಿ ಬದಲಾಯಿಸಿಲ್ಲ. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರ ಸಂಶಯ ಅಂದರೆ ಈ ಕರ್ನಾಟಕ ನಿಯಮ ಸ್ಟ್ಯಾಂಪ್ ಅಧಿನಿಯಮದ ಪ್ರಕಾರ ನೀವು 50 ಪರ್ಸೆಂಟ್ ಮೇಲೆ ಜಾಸ್ತಿ ಹಾಕಬಾರದು ಎಂದು ನೀವು ಹೇಳಿ ಅಂತ, ಅದರೆ ಅದು ಈಗ ಸಬಾರ್ಡಿನೇಟ್ ಲೆಜಿಸ್‌ಲೇಶನ್ ಆಗಿರುವುದರಿಂದ ಅದನ್ನು ನಾನು ರೂಲ್ಸ್‌ನಲ್ಲಿ ಮಾಡುತ್ತೇನೆ. ನೀವು ಏನು ಪ್ರೊಸೀಡಿಂಗ್ಸ್‌ನಲ್ಲಿ ಹೇಳಿದ್ದೀರಿ ಅದನ್ನು ನಾವು ಒಂದನ್ನೂ ಸಹಿತ ಬದಲಾಯಿಸುವುದಿಲ್ಲ. ಏಕೆಂದರೆ ಅದನ್ನು ಇಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಇದು ಸಬಾರ್ಡಿನೇಟ್ ಲೆಜಿಸ್‌ಲೇಶನ್ ಆಗಿರುವುದರಿಂದ ನಾನು ಕೇಳಿದೆ. ಪುಟ 4 ರಲ್ಲಿ 109ನೇ ಪ್ರಕರಣದಲ್ಲಿ ಒಂದನೇ ಉಪ ಪ್ರಕರಣದಲ್ಲಿ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 50ರೊಳಗೆ ಎಂಬ ಪದಗಳ ವಿರಾಮ ಚಿಹ್ನೆ : ಅಂಕಿಗಳಿಗೆ ಬದಲು ನೇಮಿಸಬಹುದಾದಂತಹ ನಿಯಮಗಳು ಒಳಪಟ್ಟು ಎಂಬ ಪದಗಳು ಸೇರಿಸತಕ್ಕದ್ದು ಎಂದು ಹೇಳಿದೆ. ಅದ್ದರಿಂದ ನಾನು ಈ ಸದನದಲ್ಲಿ ಹೇಳುತ್ತೇನೆ, ನೀವು ಅಧಿಕಾರ ಕೊಟ್ಟ ಮೇಲೆ ನಾನು ರೂಲ್ಸ್ ಮಾಡುತ್ತೇನೆ ಹಾಗೆ ರೂಲ್ಸ್ ಮಾಡುವ ಸಮಯದಲ್ಲಿ ನಾನು ತಮ್ಮನ್ನು ಕರೆಸುತ್ತೇನೆ. ಏಕೆಂದರೆ ರೂಲ್ಸ್ ಮಾಡಬೇಕಾದರೆ 10–15 ದಿವಸ ಪಬ್ಲಿಕ್‌ಗೆ ಅವಕಾಶ ಕೊಡಬೇಕಾಗುತ್ತದೆ, ಆ ಸಂದರ್ಭದಲ್ಲಿ ತಮ್ಮನ್ನು ಕರೆಸಿ, ಇದನ್ನು ನಾನು ಸದನದಲ್ಲಿ ಕಮಿಟಿ ಮಾಡುತ್ತೇನೆ. ತಮ್ಮನ್ನು ಕರೆಸಿ ನಾನು ರೂಲ್ಸ್‌ನ್ನು ಫೈನಲ್ ಮಾಡುತ್ತೇನೆ. ಅದ್ದರಿಂದ ಇದು ಸಬಾರ್ಡಿನೇಟ್ ಲೆಜಿಸ್‌ಲೇಶನ್ ಆಗುವುದರಿಂದ ಆ ತಿದ್ದುಪಡಿ ಇಲ್ಲಿ ತರುವುದಕ್ಕೆ ಬರುವುದಿಲ್ಲ. ಮತ್ತೆ ನಮ್ಮ ಹೆಗ್ಡೆಯವರು ಹೇಳಿದರು, ಅವರು ಏನು ಹೇಳಿದರು ಅಂದರೆ ಈ 50 ಪರ್ಸೆಂಟ್ ಬಗ್ಗೆ ಟ್ರಾನ್ಸ್‌ಷಿಷನಲ್ ಪ್ರಾವಿಜನ್ ಮಾಡಿಲ್ಲವೆಂದು ತಾವು ಹೇಳಿದಿರಿ. ಈಗ ಪೇಜ್ 5 ರಲ್ಲಿ ಇದೆ.

> 5. Transitional provision :- "Notwithstanding anything contained in the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977), the excess property tax inclusive of all cesses collected for the years 2002-2003, 2003-2004 or 2004-2005 over and above two times the property tax inclusive of all cesses levied for the year 2001-2002 shall be adjusted against the property tax payable for the subsequent years."

ಮತ್ತೆ ವಾಟಾಳ್ ನಾಗರಾಜ್‌ರವರು ಹೇಳಿದರು, 15 ಪರ್ಸೆಂಟ್ ಇದೆ. ನಿಮಗೆ ನಾನು ಹೇಳುತ್ತೇನೆ ಈ ಸದನದಲ್ಲಿ ನಾನು ಏನು ಹೇಳಿದ್ದೇನೆ ಅದಕ್ಕೆ ಒಂದು ಗುಂಜೂ ಸಹ ವಾಪಸ್ಸು ಹೋಗುವುದಿಲ್ಲ. ರೂಲ್ಸ್ ಮಾಡುವಾಗ ಮಾನ್ಯ ಮಾಧುಸ್ವಾಮಿಯವರನ್ನು ಕರೆಸುತ್ತೇನೆ ಮಾನ್ಯ ಈಶ್ವರಪ್ಪನವರನ್ನು ಕರೆಸುತ್ತೇನೆ, ಮಾನ್ಯ ವಾಟಾಳ್ ನಾಗರಾಜ್‌ರವನ್ನು ಕರೆಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಶಾಸನದಲ್ಲಿಯೇ ಅದನ್ನು ತರಬೇಕು. ಶಾಸನದಲ್ಲಿ ತರುವುದಕ್ಕೆ ಯಾವ ಸಮಸ್ಯೆಯು ಇಲ್ಲ. ನಿಮ್ಮ ಅಧಿಕಾರಿಗಳಿಗೆ Not less than 50% ಅಂತ ತರುವುದಕ್ಕೆ ಪ್ರಾವಿಜನ್ ಆಗುತ್ತದೆ. 50 ಪರ್ಸೆಂಟ್ ಅಂತ ತರುವುದಕ್ಕೆ ಪ್ರಾವಿಜನ್ ಆಗುವುದಿಲ್ಲ ಅಂದರೆ ಏನು ಅರ್ಥ ಇದೆ ? ನಿನ್ನೆಯವರೆಗೂ, ಇವತ್ತು ಬೆಳಿಗ್ಗೆಯವರಿಗೂ Not less than 50% ಅಂತ ಬರೆದು ಇಟ್ಟುಕೊಂಡಿದ್ದರು ಇವರು. ಆಗುವುದಿಲ್ಲ 50 ಪರ್ಸೆಂಟ್ ಅಂತ ತೀರ್ಮಾನ ಆಗಿದೆ 50 ಪರ್ಸೆಂಟೇ ಆಗಬೇಕು ಅಂದರೆ ಪ್ರಾವಿಜನ್ ಆಗುವುದಿಲ್ಲ. ನೀವು ದಯಮಾಡಿ ಅಮೆಂಡ್‌ಮೆಂಟ್ ಮಾಡಿಕೊಂಡು ತನ್ನಿ. ಮಿನಿಷ್ಟರ್‌ಗೆ ಹೇಳಿಬಿಡಿ ಅಧ್ಯಕ್ಷರೇ, ಅದನ್ನು ಅಮೆಂಡ್‌ಮೆಂಟ್ ಮಾಡಿಕೊಂಡು ತನ್ನಿ ಅಂತ ಇದರಲ್ಲಿ ರಾಜಿ ಏನೂ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಕರೆದಿದ್ದ ಸಭೆಯಲ್ಲಿ ಎಲ್ಲಾ ಪಕ್ಷದ ನಾಯಕರ ಜೊತೆ ಕುಳಿತು, ಚರ್ಚೆ ಮಾಡಿ ಏನು ತೀರ್ಮಾನ ಮಾಡಿದ್ದರೋ ಅದನ್ನು ಶಾಸನ ರೂಪದಲ್ಲಿ ತರುವುದಕ್ಕೆ ಸಮಸ್ಯೆ ಏನು ? ರೂಲ್ಸ್‌ನಲ್ಲಿ ಮತ್ತೆ ತರುತ್ತೇನೆಂದು ಏಕೆ ಹೇಳುತ್ತಿದ್ದೀರಿ? ಈಗ ತರುವುದಕ್ಕೆ ಸಮಸ್ಯೆ ಏನು ? ತೊಂದರೆ ಏನು ?

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರಿಗೆ ಗೊತ್ತು. ಅವರು ಬಹಳ ಚೆನ್ನಾಗಿ ಹೇಳಿದರು. ಅವರು ಪೆರ್‌ಫಾರ್ಮೆನ್ಸ್‌ನಲ್ಲಿ ನಂಬರ್ ಒನ್ ಅವರ ಬಗ್ಗೆ ನನಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ದಯಮಾಡಿ ತಾವು ಅವೇಶಕ್ಕೆ ಒಳಗಾಗುವಂತಹ ಅಗತ್ಯ ಇಲ್ಲ. ನಾವು ಬಹಳ ಗೌರವಯುತವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಮಾತನಾಡಿದ್ದೇವೆ. ಕೆಲವು ಒಪ್ಪಂದಕ್ಕೆ ಬಂದಿದ್ದೇವೆ ಅದನ್ನು ನೀವು ಇಂಪ್ಲಿಮೆಂಟ್ ಮಾಡಬೇಕು ಎನ್ನುವಂಥಾದ್ದು ನಮಗೆಲ್ಲರಿಗೂ ಒಪ್ಪಿಗೆಯಾಗಿರುವ ವಿಷಯ ಅದನ್ನು ನಮ್ಮ ಪಾರ್ಟಿ ಫೋರಂನಲ್ಲಿ ಮತ್ತು ನಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲಿ ಈ ರೀತಿ ಮಾಡಬೇಕೆಂದು ಹೇಳಿದ್ದೇವೆ. ಅದು ಏನಿದೆ ಅದನ್ನು ನೀವು ಅಡಾಪ್ಟ್ ಮಾಡಿಕೊಳ್ಳಿ. ಆಮೇಲೆ ಮಾಡುತ್ತೇನೆ, ನಾಳೆ ಮಾಡುತ್ತೇನೆ ಎಂದು ಹೇಳಿದರೆ ಹೇಗೆ ? ನೋಡಿ ಸ್ವಾಮಿ ನೀವು ಇರುತ್ತೀರಿ ನಾವು ಇರುತ್ತೇವೆ. ಈ ಬಿಲ್ ಶಾಶ್ವತವಾಗಿ ಇರುವಂಥಾದ್ದು, ನಾಳೆ ಯಾರೇ ಬಂದರೂ ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಅಲ್ಲಿ ಏನು ಕಂಡೀಷನ್ ಆಗಿದೆ ಅದನ್ನು ಇಂಪ್ಲಿಮೆಂಟ್ ಮಾಡಿ ನಾವು ಇನ್ನೂ ಒಂದು ಗಂಟೆ ಕುಳಿತುಕೊಳ್ಳುತ್ತೇನೆ. ಅದನ್ನು ಸೇರಿಸಿ ಬಿಲ್ ತನ್ನಿ If not, we are not going to accept that.

ಶ್ರೀ ಎಸ್.ಆರ್. ಮೋರೆ : ತಿದ್ದುಪಡಿ ಮಾಡುವುದಕ್ಕೆ ಪವರ್ಸ್ ಇಲ್ಲ. ಅದಕ್ಕೆ ನಾನೂ ರೂಲ್ಸ್‌ನಲ್ಲಿ ಮಾಡಿಕೊಡುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : Any time ನೀವು ರೂಲ್ಸ್‌ನ್ನು ಈ ಸದನಕ್ಕೆ ಬಾರದೇ ಅಮೆಂಡ್ ಮಾಡಿಕೊಳ್ಳ ಬಹುದು. ನಮ್ಮ ಕಷ್ಟ ಅರ್ಥ ಮಾಡಿಕೊಳ್ಳಿ. ಶಾಸನವನ್ನು ಅಮೆಂಡ್‌ಮೆಂಟ್ ಮಾಡುವುದಕ್ಕೆ ನಿಮಗೆ ಆಗುವುದಿಲ್ಲ. Any rule under the law, they can change. ಅದಕ್ಕೆ ಪ್ರಾವಿಜನ್ ಮಾಡುವುದು ಬೇಡ ಅಂತ ನಾವು ಹಠ ಮಾಡುತ್ತಿರುವುದು.

ಶ್ರೀ ಎಸ್.ಆರ್. ಮೋರೆ : ಅದಕ್ಕೆ ನಾನು ಮಾನ್ಯ ಅಧ್ಯಕ್ಷರ ಮುಂದೆ ಮತ್ತು ಈ ಸದನದ ಮುಂದೆ ಹೇಳುತ್ತೇನೆ ನಾವು ಏನು ಒಪ್ಪಂದಕ್ಕೆ ಬಂದಿದ್ದೇವೆ ಅದರಿಂದ ಒಂದು ಗುಂಜು ಸಹ ಬದಲಾಯಿಸುವುದಿಲ್ಲ. ರೂಲ್ಸ್‌ನಲ್ಲಿ ಮಾಡಿಕೊಡುತ್ತೇನೆ. 8 ದಿನದಲ್ಲಿಯೇ ನಾವು ರೂಲ್ಸ್ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಕಮಿಟ್ ಮಾಡಿಕೊಳ್ಳುತ್ತಿದ್ದಾರೆ.....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ರೂಲ್ಸ್‌ನಲ್ಲಿ ತಂದರೆ ಯಾವ ಘಳಿಗೆಯಲ್ಲಿ ಬೇಕಾದರೂ ಗೊತ್ತಿಲ್ಲದಂತೆ ಬದಲಾಯಿಸಬಹುದು. ಹಾಗೆ ಆಗಬಾರದು, ಶಾಸನದಲ್ಲಿ ತನ್ನಿ ಅಂತ ನಾವು ಕೇಳುತ್ತಿರುವುದು. ಅವರು ಮಾಡುತ್ತಾರೆ. ಅವರ ಬಗ್ಗೆ ನಮಗೆ ಗೌರವ ಇದೆ. ಅಧಿಕಾರಿಗಳು ಏನಾದರೂ ಇದನ್ನು ಸಬಾರ್ಡಿನೇಟ್ ಮಾಡಿಕೊಂಡು ರೂಲ್ಸ್‌ನಲ್ಲಿ ತಂದರೆ ಮುಂದಿನ ವರ್ಷದಲ್ಲಿ ಅವರು ಬದಲಾಯಿಸಬಹುದು. ನಾವು ರೂಲ್ಸ್‌ನ್ನು ಓದುವುದಕ್ಕೆ ಹೋಗುವುದಿಲ್ಲ. ನಾವು ನಿಮ್ಮ ಅಕ್ಟ್ ಓದುತ್ತೇವೆ ಅದನ್ನು ಬಿಟ್ಟರೆ ರೂಲ್ಸ್ ಮಾಡಿಕೊಳ್ಳುವುದು Any time they can change. Any time they can amend the rule under the law. ಅದಕ್ಕೆ ಅವರು ರೂಲ್ಸ್‌ನಲ್ಲಿ ತರುತ್ತೇವೆ, ರೂಲ್ಸ್‌ನಲ್ಲಿ ತರುತ್ತೇವೆ ಹಠ ಮಾಡುತ್ತಿರುವುದು. ನಾವು ಲಾ ನಲ್ಲಿ ತನ್ನಿ ನಿಮ್ಮ ಅಸ್ತಿದ್ದು ಅರ್ಧ ಬೆಲೆ ಟ್ಯಾಕ್ಸ್ ಕೊಡಿ ಅಂತ ಕೇಳಬೇಕು ಎಂದು ನಮ್ಮ ಮುಖ್ಯ ಉದ್ದೇಶವೇ ಅದು. ಅದು ಒಂದು 10 ಲಕ್ಷ ರೂಪಾಯಿಗೆ ಬಾಳುವುದಾದರೆ 5 ಲಕ್ಷ ರೂಪಾಯಿಗೆ ಟ್ಯಾಕ್ಸ್ ತೆಗೆದುಕೊಳ್ಳಿ ಅಂತ. ಇವರು ನಿನ್ನೆ ಮಾಡಿದ್ದು ಏನು ? ಅರ್ಧಕ್ಕಿಂತ ಜಾಸ್ತಿ ತೆಗೆದುಕೊಳ್ಳುತ್ತಿದ್ದನ್ನು ನಾವು ತಕರಾರು ಮಾಡಿದ್ದೇ ಅದಕ್ಕೆ. ದಯಮಡಿ ಕ್ಷಮಿಸಬೇಕು ರೂಲ್ಸ್ ಅವರ ಪ್ರೊರೋಗೇಟಿವ್ ಒಂದು ಸಲ ನೀವು ಶಾಸನ ಮಾಡಿ ಬಿಟ್ಟರೆ ಅದರ ಕೆಳಗಡೆ ರೂಲ್ಸ್ ಮಾಡಿಕೊಳ್ಳುತ್ತಾ ಹೋಗುತ್ತಾರೆ. ಅದಕ್ಕೆ ಅವಕಾಶ ಆಗಬಾರದು. It has to be fixed at 50% only. ತಾವು ಅದನ್ನು ಸ್ಪಷ್ಟವಾಗಿ ಅಮೆಂಡ್ ಮಾಡಿ ಇಲ್ಲಿ ಇಡಬೇಕು.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಈಗ ನಾವು ಪ್ರೊಸೀಡಿಂಗ್ಸ್ ಮಾಡಿದಾಗ ನಾನು ನಿನ್ನೆ ನಿಮ್ಮ ಜೊತೆ ಮಾತನಾಡಿದ ಮೇಲೆ ಎಲ್ಲಾ ನೋಡಿದೆ. ನೋಡಿದ ಪ್ರಕಾರ ಅದನ್ನು 50 ಪರ್ಸೆಂಟ್‌ಗಿಂತ ಹೆಚ್ಚು ಮಾಡಬಾರದು ಅಂತ ಹೇಳಿ, ಅದು ಮಾತುಕತೆ ಆಗಿದೆ ಅದನ್ನು ನಾನು ಒಪ್ಪುತ್ತೇನೆ. ಇಲ್ಲ ಎನ್ನುವುದಿಲ್ಲ. ಅದರೆ ನಾನು ಬಂದು ಅಕ್ಟ್‌ನಲ್ಲಿ ನೋಡಿದೆ, ಅಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಸಬಾರ್ಡಿನೇಟ್ ಲೆಜಿಸ್‌ಲೇಶನ್ ಆಗುತ್ತದೆ. ಅದಕ್ಕೆ ನಾನು ರೂಲ್ಸ್‌ನಲ್ಲಿ ಮಾಡಿ ಕೊಡುತ್ತೇನೆಂದು ಹೇಳಿ, ಈ ಪ್ರಕಾರವಾಗಿ ತಾವು ರೂಲ್ಸ್‌ನಲ್ಲಿ ತಿದ್ದುಪಡಿ ಮಾಡಬೇಕು ಅಂತ ಹೇಳಿ ನಿಮ್ಮ ಪರವಾನಿಗೆಯನ್ನು ನಾನು ಕೇಳುತ್ತಿದ್ದೇನೆ. ದಯಮಾಡಿ ತಾವು ಒಪ್ಪಿಗೆ ಕೊಟ್ಟು ಅಂಗೀಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಏನು ಸಮಸ್ಯೆ ಇದೆ ಎನ್ನುವುದನ್ನು ನಾವು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ತಿಳಿಸಿ ಆಗಿದೆ. ಈಗ ಬಿಲ್ ಪಾಸ್ ಮಾಡಿದ ತಕ್ಷಣ ರೂಲ್ಸ್‌ನ್ನು ಹೇಗೆ ಬೇಕಾದರೂ ಬದಲಾವಣೆ ಮಾಡಿಕೊಳ್ಳುವುದಕ್ಕೆ ಅವಕಾಶ ಇರುತ್ತದೆ ಮತ್ತು ಈ ಸದನಕ್ಕೆ ತೆಗೆದುಕೊಂಡು ಬರುವ ಅಗತ್ಯ ಇರುವುದಿಲ್ಲವೆಂದು ಹೇಳಿದ ಮೇಲೂ ಕೂಡ ಈ ರೀತಿ ಮಾತನಾಡುತ್ತೀರಿ. ಮತ್ತು ನಿನ್ನೆ ಪ್ರೊಸೀಡಿಂಗ್ಸ್ ತರಿಸಿ ನೋಡಿದ್ದೇವೆಂದು ಹೇಳುತ್ತೀರಿ,

ಪ್ರೊಸೀಡಿಂಗ್ಸ್‌ನಲ್ಲಿ ಏನು ತೀರ್ಮಾನ ಆಗಿದೆ ಹಾಗಾದರೆ. 50 ಪರ್ಸೆಂಟ್ ಅಂತ ಆಗಿದೆ ತಾನೆ. ಆಗಿರಬೇಕಾದರೆ ಮತ್ತೆ ಏಕೆ ಬಿಲ್‌ನಲ್ಲಿ ತರುವ ಪ್ರಯತ್ನ ನಡೆಸಲಿಲ್ಲ ? ಈಗ ನೀವು ಪ್ರಮಾಣಿಕ ಪ್ರಯತ್ನ ನಡೆಸಿದ್ದೀರಿ. ಮೊನ್ನೆ ಈ ವಿಚಾರ ಬಂದಾಗಲೇ ನಾನು ನಿಮಗೆ ಅಭಿನಂದನೆ ಸಲ್ಲಿಸಿದೆ, ಈಗಲೂ ಸಲ್ಲಿಸುತ್ತೇನೆ. ಹಿಂದೆ 3 ವರ್ಷದಲ್ಲಿ ರಾಜ್ಯದಲ್ಲಿ ತೊಂದರೆ ಆಗಿರುವುದನ್ನು ತಾವು ಅದನ್ನು ಪರಿಹಾರ ಮಾಡುವುದಕ್ಕೆ ಪ್ರಮಾಣಿಕ ಪ್ರಯತ್ನ ನಡೆಸುತ್ತಿದ್ದೀರಿ ಮತ್ತೆ ಏಕೆ ಇದರಲ್ಲಿ ಒಂದು ಸಣ್ಣ ಚೌಕಾಸಿ ನಡೆಸುತ್ತಿದ್ದೀರಿ ? ಏನು ತೀರ್ಮಾನವಾಗಿತ್ತು ದಯವಿಟ್ಟು ಆ ಪ್ರಕಾರ ಈ ಬಿಲ್‌ನಲ್ಲಿ ತರುವುದಕ್ಕೆ ಪ್ರಯತ್ನ ನಡೆಸಿ. ತೀರ್ಮಾನ ಆಗಿರುವುದು ನಾವೇನೂ ಹೊಸದು ಕೇಳುವುದಿಲ್ಲ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಅದು ಅಕ್ಟ್‌ನಲ್ಲಿ ತಿದ್ದುಪಡಿ ಮಾಡಿದರೆ ಇನ್ನು ಕೆಲವರು ಸಾಮಾನ್ಯವಾಗಿ ಬೆಂಗಳೂರಿನವರು ಈಗ ಸಣ್ಣ ಉರಿಗೆ 50 ಪರ್ಸೆಂಟ್ ಮೇಲೆ ಮಾಡಬಾರದು ಅಂತ ನಾನು ಒಪ್ಪುತ್ತೇನೆ. ಅದರೆ ಬೆಂಗಳೂರಿನಲ್ಲಿ ಪಾಷ್ ಏರಿಯಾದಲ್ಲಿ 60 ಅಲ್ಲ 70–80 ಪರ್ಸೆಂಟ್ ಕೊಡುವುದಕ್ಕೆ ರೆಡಿ ಇದ್ದಾರೆ. ನಾವು ನಮ್ಮ ಕೈ ಕಟ್ಟಿಕೊಂಡಂತೆ ತೆರಿಗೆ ಬರುವುದನ್ನು ಅದಕ್ಕೆ ನಿಮ್ಮ ಪ್ರಕಾರ ಸಣ್ಣ ಊರಿಗೆ ನಾನು ರೂಲ್ಸ್‌ನಲ್ಲಿ ಮಾಡಿಕೊಡುತ್ತೇನೆ. ಇಲ್ಲದಿದ್ದರೆ ನೀವು ಬಡವರಿಗೂ ಮತ್ತು ಸಾಹುಕಾರರಿಗೂ ಒಂದೇ ತಕ್ಕಡಿಯಲ್ಲಿ ತೂಗಿದಂತೆ ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಬೆಂಗಳೂರು ಬಿಟ್ಟು ಅಂತ ಹಾಕಿ ನಮಗೇನು ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಕಾಸ್ಟ್ ಜಾಸ್ತಿ ಆಗುತ್ತದೆ. ಬೆಂಗಳೂರಿನಲ್ಲಿ ಪಾಷ್ ಎರಿಯಾ ಅಂದರೆ ಪಾಷ್ ಏರಿಯಾಗೆ ತಕ್ಕಹಾಗೆ ಬೆಲೆ ಇರುತ್ತದೆ. ಅದರಲ್ಲಿ ಅರ್ಧ ಆಗುತ್ತದೆ. ಅಷ್ಟೇ ಅನ್ಯಾಯವೇನೂ ಆಗುವುದಿಲ್ಲ. ಬೆಂಗಳೂರು ಬಿಟ್ಟು ಅಂತ ಮಾಡುವುದು ಸೌಜನ್ಯ ಅಂತ ನಾನು ತಿಳಿದುಕೊಂಡಿಲ್ಲ. ಸೈಟ್‌ವ್ಯಾಲ್ಯು ಅಲ್ಲಿರುವ ಬಿಲ್ಡಿಂಗ್ ವ್ಯಾಲ್ಯು ಆಟೋಮೆಟಿಕ್ ಆಗಿ ಜಾಸ್ತಿ ಇರುತ್ತದೆ. ಈಗ ಸದಾಶಿವನಗರದಲ್ಲಿ ಪಾಷ್ ಏರಿಯಾ ಅಂತ ಅದರೆ ಅಲ್ಲಿ ಬೆಲೆಯೂ ಸಹ ಜಾಸ್ತಿ ಇರುತ್ತದೆಯಲ್ಲ. ಅದರಲ್ಲಿ 50 ಪರ್ಸೆಂಟ್ ಆಗುತ್ತದೆ. ಅದು ಏನೂ ತಕರಾರು ಆಗುವುದಿಲ್ಲ. ತಾವು ಅಫಿಷಿಯಲ್ ಅಮೆಂಡ್‌ಮೆಂಟ್ ಮೂವ್ ಮಾಡಿ ಒಂದು ಮಾತು ಹೇಳಿ ಅದನ್ನು ಅಮೆಂಡ್‌ಮೆಂಟ್ ಮಾಡಿದ್ದೇನೆಂದು ಅದನ್ನು ಪಾಸ್ ಮಾಡಬೇಕು ಅಂತ. ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ತೀರ್ಮಾನ ಆದರೂ, ನೀವು ಇಷ್ಟು ಒಳ್ಳೆಯವರು ಇದ್ದರೂ ಕೂಡ ನೀವು ಅಧಿಕಾರಿಗಳು ಹೇಳಿದ್ದನ್ನೇ ಏಕೆ ವಾದ ಮಾಡುತ್ತೀರಿ ? ತಾವು ಒಂದು ಸಭೆ ಕರೆದು ಮಾತನಾಡಿ ತೀರ್ಮಾನ ಮಾಡಿ, ನಾವು ಎಷ್ಟು ಸಲ ಮಾತನಾಡಬೇಕು ? ನೀವು ಅಷ್ಟೆಲ್ಲಾ ಮಾಡಿದ್ದೀರಿ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ನಮ್ಮನ್ನೆಲ್ಲಾ ಕೆರೆದು ತೀರ್ಮಾನ ತೆಗೆದುಕೊಂಡು ಮಾಡಬೇಕಾದರೆ ಮತ್ತೆ ಹೀಗೆ ಮಾಡಿದರೆ ಹೇಗೆ ? ನಮಗೇನೂ ಬೇಜಾರು ಆಗುವುದಿಲ್ಲವೇ ? ಆ ಸಭೆಯಲ್ಲಿ ಇತ್ಯರ್ಥ ಆಗಿಲ್ಲವೆಂದರೆ ಬೇಡ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ,

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ನಾನು ಆಗುವುದಿಲ್ಲವೆಂದು ಹೇಳುವುದಿಲ್ಲ ನಾನು ಮಾಡಿ ಕೊಡುತ್ತೇನೆ. ರೂಲ್ಸ್‌ನಲ್ಲಿ ಮಾಡಿಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಭೆಯಲ್ಲಿ ಈ ಮಾತನ್ನು ಹೇಳಿದ್ದಾರೆ. ನಾನು ನಿಯಮಾವಳಿಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಮಾಡಿ ಕೊಡುತ್ತೇನೆ ಎನ್ನುವ ಭರವಸೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರ ಆತಂಕ ಏನಿದೆ ಅಂದರೆ ನಿಯಮಗಳನ್ನು ಯಾವಾಗ ಬೇಕಾದರೂ ಬದಲಿಸಬಹುದು ಅದಕ್ಕೆ ತಾವು ಕಾನೂನಿನಲ್ಲಿ ಅಳವಡಿಸಿ ನಿಯಮಗಳಲ್ಲಿ ಬೇಡ ಎನ್ನುವುದು ಇದೆ. ಒಂದು ವೇಳೆ ಸರ್ಕಾರ ಮನಸ್ಸು ಮಾಡಿದರೆ ಕಾನೂನಿನಲ್ಲೂ ಕೂಡ ತಿದ್ದುಪಡಿ ತರಲು ಅವಕಾಶವಿದೆ. ತಿದ್ದುಪಡಿ ಮಾಡಬೇಕೆನ್ನುವುದಾದರೆ ನಿಯಮಾವಳಿಯಲ್ಲಾದರೂ ತಿದ್ದುಪಡಿ ತರಬಹುದು, ಮಸೂದೆಯಲ್ಲಾದರೂ ತಿದ್ದುಪಡಿ ಮಾಡಬಹುದು. ಈಗ ತಾವು ಹೇಳುವುದಕ್ಕೆ ಮತ್ತೆ ಅದಕ್ಕೆ ಅಮೆಂಡ್‌ಮೆಂಟ್ ಮೂವ್ ಮಾಡಬೇಕು, ಆ ಕಾರಣಕ್ಕಾಗಿ ನಿಯಮಾವಳಿಯನ್ನು ತಿದ್ದುಪಡಿ ಮಾಡುತ್ತೇವೆನ್ನುವ ಭರವಸೆಯ ಆಧಾರದ ಮೇಲೆ ಸಮಯ ಕೊಡಿ, ಮತ್ತೆ ಬೇಕಾದರೆ ಬದಲಾವಣೆಯನ್ನು ಬರುವ ಮಾರ್ಚ್ ತಿಂಗಳಿನಲ್ಲಿ ಅಧಿವೇಶನ ಬರುತ್ತದೆ ಆಗ ಮಾಡಿ ಕೊಡುತ್ತಾರೆ, ದಯಮಾಡಿ ಆ ಕಾನೂನನ್ನು ಪಾಸ್ ಮಾಡಿಕೊಡಬೇಕಾಗಿ ಹೇಳಬಯಸುತ್ತೇನೆ.

ಅಧ್ಯಕ್ಷರು : ಈಗ ಅರ್ಡಿನೆನ್ಸ್ ರಿಪ್ಲೇಸ್ ಮಾಡತಕ್ಕಂಥದ್ದನ್ನು ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ಅರ್ಡಿನೆನ್ಸ್ ಏನು ರಿಪ್ಲೇಸ್‌ಮೆಂಟ್ ಮಾಡುತ್ತಿದ್ದಿರಿ, ಈಗ ಈ ಬಿಲ್‌ಅನ್ನು ವಿತ್‌ಡ್ರಾ ಮಾಡಿಕೊಳ್ಳಿ ಮಾರ್ಚ್ ತಿಂಗಳಲ್ಲೇ ಅದನ್ನೇ ಇಡಿ. ಎಲ್ಲಾ ಬಿಲ್‌ಗಳನ್ನು ಇಲ್ಲಿ ಜೀವಂತವಾಗಿಟ್ಟು ಪ್ರಾಪರ್ಟಿ ಅಫ್ ಹೌಸ್ ಮಾಡಿ, ಮಾರ್ಚ್, ಫೆಬ್ರವರಿಯಲ್ಲಿ ಮಾಡುತ್ತೇವೆಂದು ಹೇಳುವುದಕ್ಕೆ ಬರುವುದಿಲ್ಲ, ಒಂದು ಸಾರಿ ಅರ್ಡಿನೆನ್ಸ್ ಆಗಿಬಿಟ್ಟದೆ, ಅದನ್ನು ರಿಪ್ಲೇಸ್ ಮಾಡುವಾಗ ನಾವು ಇಲ್ಲಿ ತಕಾರರು ಎತ್ತಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಇದು ಸದನದಲ್ಲಿ ಮಾನ್ಯ ಸಚಿವರು ಕೊಟ್ಟಿರುವ ಭರವಸೆಯಾಗಿದೆ, ಭರವಸೆಯ ಪ್ರಕಾರ ನಡೆದುಕೊಳ್ಳುತ್ತೇವೆಂದು ನಾವು ಖಂಡಿತವಾಗಿಯು ಹೇಳುತ್ತೇವೆ, ದಯಮಾಡಿ ಸಹಕಾರ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಸಭೆಯಲ್ಲಿ ಎಲ್ಲಾ ವಿರೋಧಪಕ್ಷದವರು ಕುಳಿತು ತೀರ್ಮಾನ ಮಾಡಿದ್ದು ಮುಖ್ಯವೊ, ಅದನ್ನ ಏಕೆ ಹೀಗೆ ಮಾಡುತ್ತೀರಿ ?

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ನಿನ್ನೆ ಸಂಜೆಯವರೆಗೆ ಇವರು ಅಮೆಂಡ್‌ಮಾಡಿದ್ದರು, ನಾಟ್ ಲೆಸ್ ದ್ಯಾನ್ 50 ಪರ್ಸೆಂಟ್ ಎಂದು ಬರೆದುಕೊಂಡು ಬಿಲ್ ಇಟ್ಟುಕೊಂಡಿದ್ದರು, ನಿನ್ನೆ ಸಂಜೆಯವರೆಗೆ ಮಾನ್ಯ ಮಂತ್ರಿಗಳು ಇಲ್ಲೇ ಮಾತನಾಡಿದೆವು. ನಾಟ್ ಲೆಸ್ ದ್ಯಾನ್ 50 ಪರ್ಸೆಂಟ್ ಎಂದು ಬಿಲ್‌ನಲ್ಲಿ ಸೇರಿಸಿಬಿಟ್ಟಿದ್ದಾರೆ. ನಾವೇನು ಮಾಡಿದೆವೆಂದರೆ, ಇಲ್ಲ ಸರ್ ಅದು 50 ಪರ್ಸೆಂಟ್ ಎಂದು ತೀರ್ಮಾನವಾಗಿರುವುದರಿಂದ ನಾಟ್ ಲೆಸ್ ದ್ಯಾನ್ 50 ಪರ್ಸೆಂಟ್ ಎಂದು ಇಲ್ಲಿ ಡಿಸ್ಕ್ರಿಷನ್ ಕೊಡಬೇಡಿ Not less than 50% may be 90%, 100%. ಆ ಡಿಸ್ಕ್ರಿಷನ್ ಅವರಿಗೆ ಹೋಗುವುದು ಬೇಡಿ, ಗೌರ್ನಮೆಂಟ್ ಇಟ್ಟುಕೊಳ್ಳಿ, you say simply 50%, Not lessthan ಎನ್ನುವ ಪದವನ್ನು ತೆಗೆಯಿರಿ ಎಂದರೆ ಇಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ ಸರ್.

ಶ್ರೀ ಎಂ.ಪಿ. ಪ್ರಕಾಶ್ : ತಾವು ಈ ರೀತಿಯ ಆತಂಕವನ್ನು ವ್ಯಕ್ತಮಾಡಿದ್ದೀರಿ, ನಾಳೆ ನಾಡಿದರಲ್ಲೇ ಕುಳಿತುಕೊಂಡು ನಿಯಮಾವಳಿಗಳಲ್ಲಿ ಅದನ್ನು ಮಾಡಿಕೊಡುತ್ತೇನೆ ಎನ್ನುವ

ಭರವಸೆಯನ್ನು ಸದನದಲ್ಲಿ ಕೊಟ್ಟಿದ್ದಾರೆ. ತಾವು ಅದನ್ನು ಪ್ರತಿಷ್ಠೆ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ, ನಾವು ಆ ಆತಂಕವನ್ನು ಸರಿಪಡಿಸುವುದಕ್ಕಾಗುತ್ತದೆ ; ಭರವಸೆಯನ್ನು ಕೊಟ್ಟಮೇಲೆ ತಾವು ಅನುಮಾನ ಮಾಡುವ ಅಗತ್ಯವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇನ್ನೊಮ್ಮೆ ಚರ್ಚೆ ಕರೆದಾಗ ನಾವು ಬರಬೇಕೋ ಬೇಡವೋ, ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನವಾದ ರೀತಿಯಲ್ಲಿ ಒಪ್ಪಿಕೊಳ್ಳಬೇಕೋ ಬೇಡವೋ ? ತೀರ್ಮಾನವಾಗಿದ್ದು ಒಂದು ಇಲ್ಲಿ ಬಿಲ್ ತರುವುದು ಒಂದು ರೀತಿಯಾದರೆ ಹೇಗೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ತೀರ್ಮಾನವಾಗಿದ್ದು ಒಂದು ಇಲ್ಲಿ ತಂದಿರುವುದು ಒಂದು ಅಲ್ಲ, ಅವರೇ ಹೇಳುತ್ತಾರಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರನ್ನೆ ಕೇಳಿರಿ ; ಅವರು ಇಲ್ಲವೆನ್ನುತ್ತಾರೆ.

ಶ್ರೀ ಎಸ್.ಆರ್. ಮೋರೆ : ತೀರ್ಮಾನವಾಗಿದ್ದು ಬಿಟ್ಟು ನಾವು ಒಂದು ಸ್ವಲ್ಪವು ಕೂಡ ಏನು ಮಾಡಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ತೀರ್ಮಾನವೇನು ಆಗಿದೆಯೋ ಅ ಪ್ರಕಾರ ಬಿಲ್ ತಂದಿದ್ದಾರೆ, ಅದರಲ್ಲಿ ಏನಾದರೂ ಆತಂಕವಿದ್ದರೆ, ಮತ್ತೆ ಬದಲಾವಣೆಯನ್ನು ವಿಧಾನಸಭೆಯಲ್ಲಿ ಬೇಕಾದರೆ ಮಾಡೋಣ, ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದರಲ್ಲಿ ದಯಮಾಡಿ ಎನ್ನುವ ಪ್ರಶ್ನೆ ಖಂಡಿತಾ ಬರುವುದಿಲ್ಲ, ಮೂರು ವರ್ಷದಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ, ಬಿಲ್ ತರುತ್ತಿರುವ ಸಂದರ್ಭದಲ್ಲಿ ತೀರ್ಮಾನವಾಗಿದೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ ಈಗಾಗಲೇ ನಾವು ಎರಡೂವರೆ ಪಟ್ಟಿನಿಂದ ಎರಡು ಪಟ್ಟಿಗೆ ಇಳಿಸಿ ಮತ್ತು ಖಾಲಿ ಜಾಗಕ್ಕೆ ನಾವು ಜಾಗ ಕೊಟ್ಟು, ನಮಗೆ ಸುಮಾರು 150 ಕೋಟಿ ರೂಪಾಯಿ ಕಡಿಮೆ ಸಂದಾಯವಾಗುತ್ತದೆ. ಈ ಖಾಲಿ ಜಾಗದ ಬಗ್ಗೆ ಆಗಲೇ ನಾವು 50 ಕೋಟಿ ರೂಪಾಯಿಗಳನ್ನು ಕಳೆದುಕೊಂಡೆವು.

ಶ್ರೀ ಜೆ.ಸಿ. ಮಾಧುಸ್ವಾಮಿ : ರೈತರಿಗೆ, ವಾಸವಿರುವ ಸಿಟಿಜನ್‌ಗೆ ಉಳಿದಿದೆ ದುಡ್ಡು ಯಾರೋ ಕಳ್ಳರಿಗೆ ಹಣ ಕೊಟ್ಟಿಲ್ಲ, ಇದೇನು ವಾದ ?

ಶ್ರೀ ಎಸ್.ಆರ್. ಮೋರೆ : ಈ ತೆರಿಗೆ ಏನಹಃ ಬೇರೆ ಯಾವ ಉತ್ಪನ್ನವೂ ಇಲ್ಲ, ನಾನು ನಿಮ್ಮ ಮಾತಿನಿಂದ ವಾಪಸ್ಸು ಹೋಗುವುದಿಲ್ಲ, 50 ಪರ್ಸೆಂಟ್‌ಗಿಂತ ಮೀರಿ ಹೋಗಬಾರದೆಂದು ನಾನೂ ರೂಲ್ಸ್‌ನಲ್ಲಿ ಮಾಡಿಕೊಡುತ್ತೇನೆ, ಈಗ ಅರ್ಡಿನೆನ್ಸ್ ಬದಲಾಯಿಸಬೇಕು, ಇವತ್ತು ಅಧಿವೇಶನದ ಕೊನೆಯದಿವಸ, ದಯಮಾಡಿ ಬಿಲ್ ಅನ್ನು ಪಾಸ್ ಮಾಡಿಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಸರ್ಕಾರ ಒಂದು ಭರವಸೆಯ ಮಾತನ್ನು ಕೊಟ್ಟ ಮೇಲೆ ಅದನ್ನು, ಆತಂಕದಲ್ಲಿ ಅನುಮಾನ ಮಾಡತಕ್ಕಂಥದ್ದು ಸರಿಯಲ್ಲ, ನಿಯಮಾವಳಿಯಲ್ಲಿ ಅದನ್ನು ಸರಿಪಡಿಸಿಕೊಡುತ್ತೇನೆ ಎನ್ನುವ ಮಾತನ್ನೂ ಹೇಳಿದ್ದಾರೆ, ಆದಾದ ನಂತರ ಕೂಡ ಕಾನೂನಿನಲ್ಲಿ ಬದಲಾವಣೆ ಮಾಡುವುದಾದರೆ ಮಾರ್ಚ್ ತಿಂಗಳಲ್ಲಿ ಮಾಡಿಕೊಡುತ್ತೇವೆಂದು ಅವರು ಹೇಳಿದ್ದಾರೆ. ನಿಮ್ಮ ಅನುಮಾನವೇನೆಂದರೆ, Not less than

50% ಎಂದರೆ ಇಟ್ ಮೆ ಬಿ ಎನಿತಿಂಗ್ ಮೊರೆ ದ್ಯಾನ್ ದಿ 50 ಪರ್ಸೆಂಟ್ ಆದೇ ನಿಮ್ಮ ಅನುಮಾನ, ಆ ಅನುಮಾನಕ್ಕೆ ಅವಕಾಶವಿಲ್ಲದಂತೆ ನಿಖರವಾಗಿ ಸ್ಪಷ್ಟತೆ ಇರಬೇಕೆಂದು ಹೇಳುತ್ತೀರಿ, ಆ ಸ್ಪಷ್ಟತೆಗೆ 50 ಪರ್ಸೆಂಟ್ ಎನ್ನುವ ಮಾತನ್ನು ಹೇಳೀ ಹೇಳುತ್ತೇವೆ, ಮುಂದೆ ಅದನ್ನು ತಿದ್ದುಪಡಿ ಮಾಡುತ್ತೇವೆಂದು ಹೇಳುತ್ತಾರೆ, ದಯವಿಟ್ಟು ಸಹಕಾರ ಕೊಟ್ಟು ಅದನ್ನು ಮಾಡಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಮಂತ್ರಿಗಳು, ನಿನ್ನೆ ಸಂಜೆಯವರೆವಿಗೂ ನಾಟ್ ಲೆಸ್ ದ್ಯಾನ್ 50 ಪರ್ಸೆಂಟ್ ಡ್ರಾಫ್ಟ್ ಮಾಡಿಕೊಂಡು ಬಿಲ್‌ಇಟ್ಟುಕೊಂಡು, ಅವರು ನಮಗೆ ಕನ್ವಿನ್ಸ್ ಮಾಡುವುದಕ್ಕೆ ಟ್ರೈ ಮಾಡಿ, ಬೇಡ ಸರ್, ಡೈರೆಕ್ಟ್ 50 ಪರ್ಸೆಂಟ್ ಎಂದು ಬಿಲ್ ತನ್ನಿ ಎಂದರೆ, ನಾನು ತರುವುದೇ ಇಲ್ಲವೆಂದು ಅವರು ಹಠ ಮಾಡಿದಾಗ ನಾವು ಈಲ್ಡ್ ಆಗಬೇಕೆನ್ನುತ್ತೀರಾ ? Why there was discussion yesterday ?

ಶ್ರೀ ಹೆಚ್.ಕೆ. ಪಾಟೀಲ್ : ರೂಲ್ಸ್‌ನಲ್ಲಿ ನಾವು ಮಾಡಿಕೊಡುತ್ತೇವೆಂದು ಹೇಳಿದ ಮೇಲೆ ಗೌರವಾನ್ವಿತ ಈ ಸದನ ಅದನ್ನು ಒಪ್ಪಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿನ್ನೆ ನಾವೆಲ್ಲರೂ ಕೂಡ ಕುಳಿತುಕೊಂಡು ಸನ್ಮಾನ್ಯ ಮಂತ್ರಿಗಳೊಡನೆ ಚರ್ಚೆ ಮಾಡಿದ್ದೇವೆ.

Sri M.P. Prakash : Why is he doubting the bona fides of the Government when it has given an assurance on the Floor of the House? ಹತ್ತು ಸಾರಿ, ಅವರು, ನಾನು ನಿಯಮಾವಳಿಯಲ್ಲಿ ಬದಲಾವಣೆ ಮಾಡಿಕೊಡುತ್ತೇನೆಂದು ಹೇಳುತ್ತಾರೆ, ಅದನ್ನು ಮುಂದಿನ ಅಧಿವೇಶನದಲ್ಲಿ ತಿದ್ದುಪಡಿಮಾಡಿಕೊಡುತ್ತೇನೆಂದರೆ, ನೀವು ನಮ್ಮ ಮೇಲೆ ಅನುಮಾನ ಪಟ್ಟುಕೊಂಡ ಈ ತಕ್ಷಣವೇ ಮಾಡಿಕೊಡಿ ಎಂದು ಹೇಳುತ್ತೀರಿ. ಸರ್ಕಾರಕ್ಕೂ ಕೂಡ ಒಂದು ಜವಾಬ್ದಾರಿ ಇರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸರ್, ತಾವು ಹಿರಿಯ ಸಚಿವರಿದ್ದೀರಿ, ಈ ಕಡೆಯಿಂದ ನಾವು ವಾದ ಮಾಡುತ್ತಿರುವುದರಲ್ಲೇನಾದರೂ ತಪ್ಪಿದೆಯಾ ಹೇಳಿ ?

ಶ್ರೀ ಎಂ.ಪಿ. ಪ್ರಕಾಶ್ ನಮ್ಮದೇನು ತಪ್ಪಿದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆದಿನ ಸಂಬಂಧಪಟ್ಟ ಸಚಿವರು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳ ಸಮಕ್ಷಮ ಮಾತನಾಡಿದ ಮೇಲೆ, ಇಲ್ಲಿ ನಮ್ಮ ಜೊತೆಗೆ ಮಾತನಾಡಿ, ಈ ಎಲ್ಲಾ ಕಂಡಿಷನ್ಸ್ ಅನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರು, ನಿನ್ನೆ ಇದನ್ನೇ ತೋರಿಸಿದ್ದರೆ, ಸರಿ ಇದೆ ಸರ್, ಮಾತುಕತೆಯಂತೆ ಮಾಡಿದ್ದಾರೆಂದು ಹೇಳುತ್ತಿದ್ದೆವು, ಅಷ್ಟರಲ್ಲಿ ಈ ಬದಲಾವಣೆಗೆ ಅಗತ್ಯವಿರಲಿಲ್ಲ, ಮಾರ್ಚ್‌ಗೆ ಮಾಡುತ್ತೇವೆ, ಏಪ್ರಿಲ್‌ಗೆ ಮಾಡುತ್ತೇವೆ, ಯಾರಿಗೇನು ಉಪಕಾರ ಮಾಡುವುದಕ್ಕೆ ಹೇಳುತ್ತೀರಿ ? ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಮ್ಮುಖದಲ್ಲಿ ವಿರೋಧಪಕ್ಷದನಾಯಕರು, ಸಂಬಂಧಪಟ್ಟ ಮಂತ್ರಿಗಳು ಅಧಿಕಾರಿಗಳ ಜೊತೆ ಮಾತುಕತೆ ಮಾಡಿ ಒಂದು ಅಗ್ರಿಮೆಂಟ್‌ಗೆ ಬಂದ ಮೇಲೆ, ಚಾಚುತಪ್ಪದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ, ಬೇರೇನೂ ಕೇಳುತ್ತಿಲ್ಲ. ಅದನ್ನು ಮಾಡದೆ, ನಾನು ಮಾರ್ಚ್‌ನಲ್ಲಿ ಮಾಡುತ್ತೇನೆ,

ನಾನು ಹೌಸ್‌ನಲ್ಲಿ ಕೊಟ್ಟ ಭರವಸೆಗೆ ಬೆಲೆ ಇಲ್ಲವೆಂದರೆ, ನಾಳೆ ಮೆಸೇಜ್ ಏನು ಹೋಗುತ್ತದೆ ? ನಾಳೆ ಪತ್ರಿಕೆಯಲ್ಲಿ ಏನು ಹೋಗುತ್ತದೆ ? ನೀವು, ಸಾಮಾನ್ಯ ತೆರಿಗೆ ಕೊಡುವವನಿಗೆ ಏನು ಮೆಸೇಜ್ ಕಳುಹಿಸುತ್ತಿದ್ದೀರಿ ? ಯಾವ ಒಪ್ಪಂದವಾಯಿತು ಅದನ್ನು ಇಂಪ್ಲಿಮೆಂಟ್ ಮಾಡಲು ಏನು ಕಷ್ಟ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಾವು ಹೊಸದಾಗಿ ಒಂದು ಹೇಳಿದರೆ ತಾವು ಕೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಬಂದಿರುವ ಪ್ರಶ್ನೆ, ನಿನ್ನೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಿರಿಯನಾಯಕರ ಜೊತೆಗೆ ಮಾತನಾಡಿದ ಮಾತಿಗೆ ವಿರುದ್ಧವಾಗಿ ಹೋಗುವುದು ಸರ್ಕಾರದ ನಿರ್ಣಯವಲ್ಲ, ಇದನ್ನು ಸ್ಪಷ್ಟ ಮಾಡಿದ್ದೇವೆ. ಇಲ್ಲಿ ಬಂದಿರುವ ಪ್ರಶ್ನೆ, ಶೇಕಡ 50ಕ್ಕಿಂತಲೂ ಕಡಿಮೆ ಇಲ್ಲದಂತೆ ಎನ್ನುವ ಶಬ್ಧ ಅದು ಹೆಚ್ಚಾಗಬಹುದೆನ್ನುವ ಆತಂಕವಿದ್ದುದ್ದರಿಂದ, ಅದು ಒಂದು ಅರ್ಥೈಸುವಿಕೆ, it is a question of interpretation.

ಶ್ರೀ ಬಿ.ಎಸ್. ಯಡಿಯೂರಪ್ಪ : ತಿದ್ದುಪಡಿಯನ್ನು ನಾವೇ ಮೂವ್ ಮಾಡುತ್ತೇವೆ ಅದನ್ನು ಒಪ್ಪಕೊಳ್ಳಿ ಅದರಲ್ಲಿ ತಪ್ಪೇನು ಇದೆ ? ಅದು ಒಂದು ನಿಮಿಷದ ಕೆಲಸ.

ಶ್ರೀ ಎಂ.ಪಿ. ಪ್ರಕಾಶ್ : ತಿದ್ದುಪಡಿ ತರುವುದಾದರೆ ತನ್ನಿ ನಾವು ನಿಮ್ಮ ಅಧಿಕಾರಕ್ಕೆ ಆಕ್ಷೇಪ ಮಾಡುವುದು ಮೊಟಕು ಮಾಡುವುದು ನಮ್ಮ ಉದ್ದೇಶವಲ್ಲ, ಪ್ರಶ್ನೆ ಉದ್ಭವವಾಗಿರುವುದು ಇಷ್ಟೆ, ಅದನ್ನು ನಿಯಮಾವಳಿಗಳಲ್ಲಿ ಸರಿಪಡಿಸುತ್ತೇನೆಂದು ಹೇಳಿದಾಗ, ಮಾನ್ಯ ಮಾಧುಸ್ವಾಮಿಯವರು ಏನು ಹೇಳಿದರೆಂದರೆ, ನಿಯಮಾವಳಿಯನ್ನು ಯಾವುದಾದರೂ ಸಂದರ್ಭದಲ್ಲಿ ಬದಲಿ ಮಾಡಬಹುದು. ಆದುದರಿಂದ ಅದು ಸರಿಯಾದುದಲ್ಲ, ನಿರ್ದಿಷ್ಟತೆ ಇರಬೇಕು, ಅದನ್ನು ಕಾನೂನಿನಲ್ಲೇ ತನ್ನಿ ಎಂದರು ; ಅದು ಸ್ವಾಗತಾರ್ಹವಾದ ಮಾತು. ಕಾನೂನಿನಲ್ಲಿ ತರುವುದಾದರೆ ಮುಂದಿನ ಮಾರ್ಚ್ ಅಧಿವೇಶನದಲ್ಲಿ ತರುತ್ತೇವೆ, ಈಗ ನಿಯಮಾವಳಿಯಲ್ಲಿ ಬದಲಾವಣೆ ಮಾಡುತ್ತೇವೆಂದರು. ಇಷ್ಟೆಲ್ಲಾ ಆದಾಗ ಸರ್ಕಾರ ಹೇಳಿರುವ ಮಾತಿನ ಮೇಲೆ ಸ್ವಲ್ಪ ಭರವಸೆಯನ್ನು ಇಟ್ಟುಕೊಳ್ಳಿ ಎನ್ನುವ ಮಾತನ್ನು ಹೇಳಿದ್ದೇವೆಯೇ ವಿನಹ, ನೀವು ಬದಲಿಸಬಹುದು ಈ ಕೂಡಲೇ ಆಗಬಹುದೆನ್ನುವುದಾದರೆ, ಆಗುವುದಾದರೆ, you move the amendment. If the House agrees for it, it is alright. ಒಂದುಸತ್ಸಂಪ್ರದಾಯವನ್ನು ಇಟ್ಟುಕೊಂಡು ಸರ್ಕಾರ ಈ ವಿಚಾರವನ್ನು ಸದನದಲ್ಲಿ ಹೇಳಿದ ಮೇಲೆ, ಅದನ್ನು ಅತ್ಯಂತ ಜವಾಬ್ದಾರಿಯಿಂದ ಮಾನ್ಯ ಸಚಿವರು ಹೇಳಿದ್ದಾರೆ, ಗೌರವಿಸಿ ಎಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ, we don't want to go back on the words, whatever is agreed upon.

ಶ್ರೀ ವಾಟಾಳ್‌ನಾಗರಾಜ್ : ಪ್ರತಿಷ್ಠೆ ವಿಷಯ ಮಾಡಿಕೊಂಡು ಈ ಮಸೂದೆಗೆ ಒಪ್ಪಿಗೆ ಪಡೆಯುವುದರಲ್ಲಿ ಹಿಂದಕ್ಕೆ ಹೋಗುತ್ತಿದ್ದೀರಿ, ದಯಮಾಡಿ ಆಗಬಾರದು.

ಶ್ರೀ ಹೆಚ್.ಕೆ. ಪಾಟೀಲ್ : ಪ್ರತಿಷ್ಠೆ ಏನೂ ಇಲ್ಲ, ಈಗಾಗಲೇ ಅವರು ಸ್ಪಷ್ಟವಾದ ಭರವಸೆಯನ್ನು ಸದನಕ್ಕೆ ಕೊಟ್ಟಿರುವ ಹಿನ್ನೆಲೆಯೊಳಗೆ, ದಯಮಾಡಿ ಅದನ್ನು ಎಲ್ಲರೂ ಒಪ್ಪಬೇಕೆಂದು ಕೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ, ಇನ್ನು ಮುಂದೆ ನಾವು ಮಾತುಕತೆಗೆ ಹೋಗುವುದು ಸರಿ ಇಲ್ಲ, ಮಾತುಕತೆಯಲ್ಲಿ ಒಂದು ತೀರ್ಮಾನ, ಸದನದಲ್ಲೊಂದು ತೀರ್ಮಾನ..

ಶ್ರೀ ಹೆಚ್.ಕೆ. ಪಾಟೀಲ್ : ಪ್ರಶ್ನೆ ಇಷ್ಟೆ ರೂಲ್ಸ್‌ನಲ್ಲಿ ಹಾಕಿದರೆ ಸಮಾಧಾನವಾಗುತ್ತದೆಯೋ ಇಲ್ಲವೋ ಎನ್ನುವುದನ್ನು ಹೇಳಬೇಕು, ರೂಲ್ಸ್‌ನಲ್ಲಿ ತರುತ್ತೇವೆ, ಬೇಕಾದರೆ ಮಾರ್ಚ್ ಅಧಿವೇಶನದಲ್ಲಿ ಕಾನೂನು ಮೂಲಕ ತರುತ್ತೇವೆನ್ನುವ ಭರವಸೆಯ ಹಿನ್ನೆಲೆಯಲ್ಲಿ ದಯಮಾಡಿ ತಾವು ಇದಕ್ಕೆ ಒಪ್ಪಿಗೆ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಖಂಡಿತಾ ಸಾಧ್ಯವಿಲ್ಲ, ನಾವು ಮೂರು ವರ್ಷದಿಂದ ಹೋರಾಟ ಮಾಡಿಕೊಂಡು ಬಂದು ಏನು ಪ್ರಯೋಜನ ?

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ಆ ಸಭೆಯಲ್ಲೇ ನಮಗೆ ಒಪ್ಪಿಸಬಹುದಾಗಿತ್ತಲ್ಲಾ, ದೆರ್ ವಾಸ್ ಸಂ ಡಿಫಿಕಲ್ಟಿ, ಅಲ್ಲೆ ಕನ್ವಿನ್ಸ್ ಮಾಡಿದ್ದರೆ ಆಗಿತ್ತು, ನಿನ್ನೆ ಕೂಡ ತಾವು ನಾಟ್ ಲೆಸ್ ದ್ಯಾನ್ 50 ಪರ್ಸೆಂಟ್ ಎನ್ನುವುದನ್ನು ತರುವುದಕ್ಕೆ ಹೊರಟ್ಟಿದ್ದೀರಿ, ನಮಗೆ ತಂದು ತೋರಿಸಿದಿರಿ, ನಮ್ಮ ಜೊತೆ ಚರ್ಚೆ ಮಾಡಿದಿರಿ.

ಶ್ರೀ ಎಸ್.ಆರ್. ಮೋರೆ : ಇದು ಸಬ್‌ಅರ್ಡಿನೇಟ್ ಲೆಜಿಸ್ಲೇಷನ್ ಆಗುತ್ತದೆ, ರೂಲ್ಸ್‌ನಲ್ಲಿ ನಾನು ಮಾಡಿಕೊಡುತ್ತೇನೆ, ಇದರಲ್ಲಿ ಒಂದು ಗುಂಜು ವಾಪಸ್ ಹೋಗುವುದಿಲ್ಲ, ಇದು ಕಮಿಟ್‌ಮೆಂಟ್ ಇನ್ ದಿ ಹೌಸ್. ಇದರ ಬಗ್ಗೆ ಈಗಾಗಲೇ ನಮ್ಮ ಹಿರಿಯ ಸಚಿವರಾದ ಮಾನ್ಯ ಎಂ.ಪಿ. ಪ್ರಕಾಶ್ ಹೇಳಿರುವಂತೆ ಆ ಪ್ರಕಾರ ಮಾರ್ಚ್‌ನಲ್ಲಿ ಬೇಕಾದರೆ ತಿದ್ದುಪಡಿಯನ್ನು ತರುತ್ತೇನೆ, ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಲ್‌ನ ಬಗ್ಗೆ ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಿ ಹಿಂದಕ್ಕೆ ಹೋಗುತ್ತಿರುವುದಕ್ಕೆ ನಾವು ಒಪ್ಪುವುದಿಲ್ಲ ಸರ್.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಮುಂದಿನ ಅಧಿವೇಶನದಲ್ಲಿ ತರುವುದಕ್ಕಿಂತ ಈಗಲೇ ಅದನ್ನು ಅಳವಡಿಸಿಕೊಂಡು ಪಾಸು ಮಾಡಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಆಗಬಹುದು. ತಾವು ಒಂದು ಅಮೆಂಡ್‌ಮೆಂಟನ್ನು ಮೂವ್ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮೊನ್ನೆ ಎಲ್ಲಾ ಕೆಲವು ಅಧ್ಯಕ್ಷರಿಗೆ ಹೇಳಿ ಅದನ್ನು ಅಲ್ಲಿ ಸೇರಿಸಿಕೊಂಡು ಮಾಡುವುದು ಎಂದು ತೀರ್ಮಾನವಾಯಿತು. ಅವತ್ತು ಅಮೆಂಡ್‌ಮೆಂಟನ್ನು ಮೂವ್ ಮಾಡಲಿಲ್ಲ.

(ಗೊಂದಲ)

Sri. J.C. Madhuswamy : OK I am moving that amendment. ಬರೆದುಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ನಾವು ಅಧಿಕೃತವಾಗಿ ಅದನ್ನು ಕಳುಹಿಸಿಕೊಡಬೇಕಾಗಿರ ತಕ್ಕಂಥದ್ದಲ್ಲ. ಅದು ಸದನದ ಅಭಿಪ್ರಾಯವಾಗಿರುವುದಾದರೆ ತಾವು ಸೇರಿಸಿ ಅದನ್ನು ಮಾಡಿಸಬಹುದು. ಹಿಂದೆ ಆಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಅಮೆಂಡ್‌ಮೆಂಟನ್ನು ಮೂವ್ ಮಾಡುತ್ತೇವೆ. ಅದನ್ನು ಸೇರಿಸಿ ಮಾಡಿಬಿಡಿ.

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಯಾವ ಪ್ಯಾರಾಗ್ರಾಫ್‌ನಲ್ಲಿ ಎಂದು ಬೇಕಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಲ್‌ನಲ್ಲಿ ಆ ಪ್ರಾವಿಷನನ್ನೇ ತೆಗೆದುಬಿಟ್ಟಿದ್ದಾರೆ.

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಬಿಲ್‌ನ್ನು ತಾವು ಓದಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ಎಲ್ಲಿಗೆ ಸೇರಿಸಬೇಕೆಂದು ನಾವು ಹುಡುಕುತ್ತಿರುವುದು. ಬಿಲ್‌ನಲ್ಲಿ ಇಲ್ಲವೆಂದೇ ತಾವು ಪ್ರಾವಿಷನನ್ನು ತೆಗೆದಿದ್ದೀರಿ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಹೆಗ್ಡೆಯವರೇ, ತಾವು ಹೇಳಿದ ಪ್ರಕಾರ ಒಂದು ಲಕ್ಷ ಜನಸಂಖ್ಯೆ ಇರುವ ಹಾಗೆ ಬೇಕಾದರೆ ನೀವು ಅಮೆಂಡ್‌ಮೆಂಟನ್ನು ಮೂವ್ ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ನಾವೊಂದು ಸ್ಪಷ್ಟವಾದ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರುಗಳೇನು ಅವರು ಆತಂಕವನ್ನು ವ್ಯಕ್ತಮಾಡುತ್ತಿದ್ದಾರೆ, ನಮ್ಮ ಸನ್ಮಾನ್ಯ ಪೌರಾಡಳಿತ ಸಚಿವರು ಹೇಳಿದ ಹಾಗೆ ರೂಲ್ಸ್‌ನಲ್ಲಿ ಅದನ್ನು ತರುತ್ತೇವೆ. ಆ ಹಿನ್ನೆಲೆಯೊಳಗೆ ದಯಮಾಡಿ ಇದನ್ನು ಪಾಸ್ ಮಾಡಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಗುವುದಿಲ್ಲ.

(ಗೊಂದಲ)

ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ)

ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : 2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಧರಣಿ ಮಾಡಲು ಬಾವಿಗೆ ಬಂದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಡಿವಿಜನ್‌ಗೆ ಪ್ರೆಸ್ ಮಾಡುತ್ತಿದ್ದೇನೆ. ರಾಜ್ಯದ ಜನತೆಗೆ ಗೊತ್ತಾಗಲಿ.

(ಗೊಂದಲ)

ಅಧ್ಯಕ್ಷರು : ಹೋಗಿ, ನಿಮ್ಮನಿಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇಷ್ಟು ಸುಸೂತ್ರವಾಗಿ ಅಧಿವೇಶನವನ್ನು ನಡೆಸಿಕೊಂಡು ಹೋಗುವಾಗ ಮುಖ್ಯಮಂತ್ರಿಗಳ ಎದುರುಗಡೆ ಮಾತನಾಡಿ ಒಪ್ಪಿಕೊಂಡು ಬಂದು

ಗೌರವಯುತವಾಗಿ ಮಾಡುವುದನ್ನು ಇವರೇನೂ ದೊಡ್ಡ ಉಪಕಾರ ಮಾಡುವ ಹಾಗೆ ಸಚಿವರು ಉಪದೇಶ ಹೇಳಿಕೊಂಡು ಮಾರ್ಚ್‌ನಲ್ಲಿ ಮಾಡುತ್ತೇನೆ, ಏಪ್ರಿಲ್‌ನಲ್ಲಿ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ. ಹಾಗಾದರೆ ಅಲ್ಲಿ ಮಾತುಕತೆ ಏತಕ್ಕೆ ಬೇಕಾಗಿತ್ತು ? ನಾವು ಮಿನಿಟ್ ಮಾಡಿ ಸಹಿ ಮಾಡಿಸಬೇಕಾಗಿತ್ತಾ ? We have got great respect. ಒಂದು ಮಾತು ಎಂದು ಹೇಳಿದ ಮೇಲೆ, ಇದು ರಾಜ್ಯದ ಜನರಿಗೂ ಗೊತ್ತಾಗಲಿ. ಇನ್ನು ಮುಂದೆ ಯಾವುದೇ ಮಾತುಕತೆಗೂ ಕರೆಯಬೇಡಿ. ಮಾತುಕತೆಯೇ ಬೇಡ. ಉಪದೇಶದ ಮಾತುಗಳನ್ನು ಹೇಳಲು ಬಹಳ ಜನ ಇದ್ದಾರೆ. ಅಲ್ಲಿ ಮಾತುಕತೆ ಸಮಯದಲ್ಲಿ ಮಾನ್ಯ ಎಂ.ಪಿ. ಪ್ರಕಾಶ್ ಅವತ್ತಿನ ದಿವಸ ಇರಲಿಲ್ಲ. ಪ್ರತಿಯೊಂದು ಸಂದರ್ಭದಲ್ಲೂ ಸುಸೂತ್ರವಾಗಿ ಅಧಿವೇಶನ ನಡೆಯುವುದಕ್ಕೂ ಕಲ್ಲು ಹಾಕಿಕೊಂಡು, ಅಡ್ಡಿ ಮಾಡಿಕೊಂಡು ಏನೋ ತಮ್ಮ ಮನಸ್ಸಿಗೆ ಬಂದ ಹಾಗೆ ಉಪಕಾರವನ್ನು ಮಾಡುವವರ ಹಾಗೆ ಏನು ಉಪಕಾರವನ್ನು ಮಾಡುತ್ತೀರಿ ನಮಗೆ ? ಇನ್ನು ಮುಂದೆ ಯಾವುದೇ ಮಾತುಕತೆಗೂ ಕರೆಯಬೇಡಿ. ನಾವು ಯಾವುದಕ್ಕೂ ಬರುವುದಿಲ್ಲ. ನಮಗೆ ಗೌರವ ಇಲ್ಲವೆನ್ನುವುದಾದರೆ ಮಾತುಕತೆಯಾಗಿ ತೀರ್ಮಾನವಾದಮೇಲೆ ಅದಕ್ಕೆ ಬದ್ಧರಿಲ್ಲವೆನ್ನುವುದಾದರೆ ಇನ್ನು ಮುಂದೆ ನಾವು ಮಾತುಕತೆಗೆ ಬರುವುದಿಲ್ಲ. ಎಲ್ಲಾ ಇಲ್ಲೇ ಸಹಿ ಆಗಲಿ. ತೀರ್ಮಾನವಾಗಲಿ. ನಿಮಗೆ ಬಹುಮತ ಇದ್ದರೆ ನೀವು ಬೇಕಾದ್ದು ಮಾಡಿಕೊಂಡು ಹೋಗಿ. ನಾನು ಡಿವಿಜನ್‌ಗೆ ಪ್ರೆಸ್ ಮಾಡಿದ್ದೇನೆ ಸಾರ್. ಮಾಡಿ. ಮಾತು ಎತ್ತಿದರೆ ನಮ್ಮ ಮಾನ್ಯ ಎಂ.ಪಿ. ಪ್ರಕಾಶ್‌ರವರು ಉಪದೇಶವನ್ನು ಶುರುಮಾಡುತ್ತಾರೆ. ಬೇರೆ ಏನೂ ಇಲ್ಲ. ಕೊನೆಯ ದಿವಸ ರಿಪ್ಲೈಮಾಡಿಕೊಂಡು ನಗುನಗುತ್ತಾ ಹೋಗೋಣವೆನ್ನುವ ಟೈಮ್‌ನಲ್ಲಿ ಗೊಂದಲ ಉಂಟು ಮಾಡುವ ಪ್ರಯತ್ನವನ್ನು ಮಾಡುತ್ತಾರೆ. ಅವರೇನು ಆ ಮೀಟಿಂಗ್‌ನಲ್ಲಿ ಇರಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಯಡಿಯೂರಪ್ಪನವರೇ ಒಂದೇ ಒಂದು ನಿಮಿಷ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರತಿಯೊಂದಕ್ಕೂ ಉಪದೇಶ ಅಲ್ಲಿ ನಿಂತುಕೊಂಡು ನಿಮ್ಮ ಉಪದೇಶ ಯಾರಿಗೆ ಬೇಕಾಗಿದೆ ?

(ಗೊಂದಲ)

Sri. J.C. Madhuswamy : Not less than 50%. ಎಂದು ಹೇಳಿದವರು. ಒರಿಜಿನಲ್ ಆಕ್ಟ್‌ನಲ್ಲಿ ಇಲ್ಲ, ನಾನು ರೂಲ್ಸ್‌ನಲ್ಲಿ ತರುತ್ತೇನೆಂದರೆ ಹೇಗೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ನಾಲ್ಕು ಜನ ಮುಖಂಡರುಗಳು ಬಂದು ಏಕೆ ಮಾತನಾಡಿದಿರಿ ? ನೀವೇ ಓದಿ ನೋಡಿ ನಾವು ಕೊಟ್ಟಂಥ ಗೌರವವನ್ನು ಸರಿಯಾಗಿ ಉಳಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡಿ.

ಶ್ರೀ ಎಸ್.ಆರ್. ಮೋರೆ : ರೂಲ್ಸ್‌ನಲ್ಲಿ ಮಾಡಬೇಕೆಂದು ಅದನ್ನು ತಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಪ್ರಕಾಶ್‌ರವರು ಅಲ್ಲಿ ನಿಂತುಕೊಂಡು ಒಂದು ಉಪದೇಶವನ್ನು ಮಾಡುವುದು, ಹೆಚ್.ಕೆ. ಪಾಟೀಲರು ಒಂದು ಉಪದೇಶವನ್ನು ಮಾಡುವುದು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಪ್ರತಿಯೊಬ್ಬರಿಗೂ ಆ ಅಧಿಕಾರ ಇದೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಅವರೇನು ಹೇಳುತ್ತಾರೋ ಕೇಳೋಣ.

ಶ್ರೀ ಎಂ.ಪಿ. ಪ್ರಕಾಶ್ : ಸ್ವಲ್ಪ ತಾವು ದಯಮಾಡಿ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಪ್ರೆಸ್ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ನಮಗೆ ಹೇಳುವುದಕ್ಕೆ ಅಧಿಕಾರ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಹೇಳುವುದು ಡಿವಿಜನ್ ಟೈಮ್‌ನಲ್ಲಿ ನೀವೇನು ಹೇಳುತ್ತೀರಿ ?

ಶ್ರೀ ಎಂ.ಪಿ. ಪ್ರಕಾಶ್ : ವಿರೋಧ ಪಕ್ಷದ ನಾಯಕರು ಮಾತನಾಡತಕ್ಕ ರೀತಿನಾ ಇದು ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಹಾಗಾದರೆ ಇದನ್ನು ಸರ್ಕಾರವೆಂದು ಕರೆಯಬೇಕಾ ? ನೀವು ಮಾಡಿದ್ದೆಲ್ಲಾ ನಾವು ಒಪ್ಪಿಕೊಳ್ಳಬೇಕಾ ? ಇನ್ನು ಮೇಲೆ ನಮ್ಮನ್ನು ಯಾವುದೇ ಮಾತುಕತೆಗೂ ಕರೆಯಬೇಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಡಿವಿಜನ್‌ಗೆ ಪ್ರೆಸ್ ಮಾಡುತ್ತಿದ್ದೇವೆ. ಈ ಸ್ಟೇಜ್‌ನಲ್ಲಿ ಬೇರೆ ಏನು ಮಾತನಾಡುವುದು ಇದೆ ?

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಆ ತರಹವೇ ಮಾಡಿದ್ದೇವೆ. ಒಂದು ವೇಳೆ ಆಗದೇ ಹೋದರೆ ರೂಲ್ಸ್‌ನಲ್ಲಿ ಮಾಡುವುದಕ್ಕೆ ಅವಕಾಶ ಇದೆ. ಅದರಲ್ಲಿ ಮಾಡಿಕೊಡುತ್ತೇವೆ. ಅವತ್ತು ಒಪ್ಪಂದ ಆದ ರೀತಿ ಮಾಡುತ್ತೇವೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಲ್‌ನ್ನು ವಾಪಸ್ ತೆಗೆದುಕೊಂಡು ಮಾಡಿ. ತಾವು ದಯಮಾಡಿ ಬಿಲ್‌ನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು. ಈ ರೀತಿ ಅವೇಶದಿಂದ ಮಾತನಾಡಿದರೆ ಹೇಗೆ ?

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಇದ್ದಿರಿ. ನೀವು ಇದ್ದೂ ಒಂದು ತೀರ್ಮಾನಕ್ಕೆ ಬಂದು ಒಟ್ಟಾರೆ ಅಭಿಪ್ರಾಯಕ್ಕೆ ಬಂದಮೇಲೆ ಇಲ್ಲಿ ಬದಲಾವಣೆ ಆಗತಕ್ಕದ್ದು ಒಳ್ಳೆಯದಲ್ಲ. ಈಗ ತಿದ್ದುಪಡಿಯನ್ನು ತನ್ನಿ. ಅದೇನೂ ದೊಡ್ಡದಲ್ಲ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಅವತ್ತು ನಾವೇನು ಕುಳಿತುಕೊಂಡು ಚರ್ಚೆ ಮಾಡಿದ್ದೇವೆ, ಅವತ್ತು ಆ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಎಲ್ಲಾ ವಿರೋಧಪಕ್ಷದ ಮುಖಾಂಡರುಗಳೊಡನೆ ಕುಳಿತುಕೊಂಡು ಒಂದು ತೀರ್ಮಾನವನ್ನು ಮಾಡಿದ್ದೇವೆ. ಈಗ ಅದರಂತೆಯೇ ಮಾಡಿದ್ದಾರೆ ಎಂದು ನಮ್ಮ ಮಂತ್ರಿಗಳು ಹೇಳುತ್ತಿದ್ದಾರೆ. ಒಂದು ವೇಳೆ ರೂಲ್ಸ್‌ನಲ್ಲೂ ಕೂಡ ಆದೇನಾದರೂ ಬಿಟ್ಟುಹೋಗಿದ್ದರೆ ಸೇರಿಸುವುದಕ್ಕೆ ಅವಕಾಶ ಇದೆಯೆಂದು

ಹೇಳುವಾಗ ಮತ್ತೆ ಅದರಿಂದ ನಮಗೆ ಬಹಳ ತೊಂದರೆಯಾಗಿಬಿಟ್ಟಿದೆ ಎಂದು ದೊಡ್ಡ ಗಲಾಟೆ ಮಾಡಬೇಕಾದಂಥ ಅಗತ್ಯವೇನೂ ಇಲ್ಲ. ನೀವು ಹೇಳಿದ ರೀತಿಯಲ್ಲೇ ರೂಲ್ಸ್‌ನಲ್ಲಿ ಅದನ್ನು ಅಳವಡಿಸಿ ಮಾಡಿಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ದಯವಿಟ್ಟು ಈ ಬಿಲ್‌ನ್ನು ಪಾಸ್ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರ ಅಭಿಪ್ರಾಯಗಳನ್ನೆಲ್ಲಾ ಸಂಪೂರ್ಣವಾಗಿ ಗೌರವಿಸಿ ನಾವು ಮಾತನಾಡುತ್ತೇವೆ. ಇಲ್ಲಿ ಪ್ರಶ್ನೆ ಬಂದಿರುವುದು ಸನ್ಮಾನ್ಯ ಮಾಧುಸ್ವಾಮಿಯವರು, ಹಿರಿಯರೆಲ್ಲರೂ ನೋಡುತ್ತಿರುವಾಗ salient features of the proposed amendments to the Karnataka Municipalities Act and the Karnataka Municipal Corporations Act. ಎಂದು ಹೇಳಿ ಅದರಲ್ಲಿ ಬರೆದಿರುವ ಕೊನೆಯ 6 ರಲ್ಲಿ to empower the Municipalities to take not less than 50% of the capital value notified under the Karnataka Stamp Act for the purpose of calculating tax, this would be prescribed in the relevant taxation rules, ಎನ್ನತಕ್ಕಂಥದ್ದನ್ನು ನೋಡಿ not less than 50%. ಅಂದಾಗ ಅದು ಹೆಚ್ಚು ಅಗಬಹುದು ಎನ್ನುವ ಆತಂಕ ಸಹಜವಾಗಿ ಅವರು ವ್ಯಕ್ತಮಾಡಿರುವುದು ಸರಿಯಾದುದೇ. ಅದರ ಬಗ್ಗೆ ಯಾರದ್ದೂ ಆಕ್ಷೇಪಣೆ ಇಲ್ಲ. ಆದರೆ ಕಾನೂನಿನಲ್ಲಿ ತಾವು 9 ನೇ ಪರಿಚ್ಛೇದವನ್ನು ತೆಗೆದು ನೋಡಿದರೆ ಅಲ್ಲಿ not less than ಎನ್ನು ಪ್ರಶ್ನೆ ಬಂದಿಲ್ಲ. ಆ ಕಾರಣಕ್ಕಾಗಿ ಇದಕ್ಕೆ ತಿದ್ದುಪಡಿಯನ್ನು ತರುತ್ತೇವೆ ಎನ್ನುವುದಾದರೂ ಕೂಡ ಅದುಏಕೆ ತರಬೇಕು ಎನ್ನುವುದು ಈ 9 ರಲ್ಲಿ ಇದೆ. ಅದ್ದರಿಂದ ಇದೊಂದು ಸಬಾರ್ಡಿನೇಟ್ ಲೆಜಿಸ್ಲೇಷನ್ ಆಗುವುದರಿಂದ ನಾವು ಇದಕ್ಕೆ ಈ ವಿಚಾರದಲ್ಲಿ ನೀವು ಹೇಳಿದಂತೆ ನಿಯಮಾವಳಿಗಳಲ್ಲೇ ಅದನ್ನು ಸರಿಪಡಿಸುತ್ತೇವೆ ಎನ್ನತಕ್ಕ ಮಾತನ್ನು ಅವರು ಸದನದಲ್ಲಿ ಅರಿಕೆ ಮಾಡಿಕೊಂಡಿದ್ದಾರೆ. ಒಂದು ವೇಳೆ ಅದಕ್ಕೆ ತಾವು ಸಮ್ಮತಿ ಇಲ್ಲ, ಏಕೆಂದರೆ ರೂಲ್ಸ್‌ನ್ನು ಯಾವುದೇ ಸಮಯದಲ್ಲಿ ಬದಲಾವಣೆ ಮಾಡಬಹುದು ಎನ್ನತಕ್ಕಂಥದ್ದು ಸಹಜವಾದುದೇ. ಆ ಕಾರಣಕ್ಕಾಗಿ ಒಂದು ನಿರ್ದಿಷ್ಟತೆ ಇರಬೇಕು. ಒಂದು ಕಾನೂನಿಗೆ ನಿರ್ದಿಷ್ಟತೆ ಇರಬೇಕು. ಆ ನಿರ್ದಿಷ್ಟತೆಯನ್ನು ಬಯಸುವುದಕ್ಕಾಗಿಯೇ ಅಮೆಂಡ್‌ಮೆಂಟನ್ನು ಮಾರ್ಚ್ ತಿಂಗಳಿನಲ್ಲಿ ಬರತಕ್ಕ ಅಧಿವೇಶನದಲ್ಲಿ ತರುತ್ತೇವೆ. ಈಗ ಅದನ್ನು ಹೇಳಿದ ಮೇಲೆ ಇಷ್ಟೆಲ್ಲಾ ಪ್ರಶ್ನೆ ಉದ್ಭವವಾಗಿದ್ದು ಯಾವ ಕಾರಣಕ್ಕಾಗಿ ಎಂದರೆ, ಇಲ್ಲಾ ನೀವು ಈಗಲೇ ಹೇಳಿ, ಈ ಕೂಡಲೇ ಹೇಳಿ, ಈ ಕೂಡಲೇ ಮಾಡಲಿ ಎನ್ನತಕ್ಕಂಥದ್ದನ್ನು ತಾವು ಪ್ರತಿಷ್ಠೆ ಮಾಡಿಕೊಳ್ಳಬೇಡಿ. ದಯಮಾಡಿ ಸದನದಲ್ಲಿ ಹೇಳಿರತಕ್ಕಂಥದ್ದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. ತಾವೆಲ್ಲರೂ ಕೂಡ ಸಹಕಾರ ಕೊಟ್ಟಿದ್ದೀರಿ. ತಾವು ಎಲ್ಲರೂ ಬಂದು ಮಾತನಾಡಿದ್ದೀರಿ. ಆ ಮಾತಿಗೆ ವಾಪಸ್ಸು ಹೋಗತಕ್ಕಂಥ ಪ್ರಶ್ನೆಯೇ ಇಲ್ಲ ಎನ್ನತಕ್ಕಂಥದ್ದನ್ನು ಮಾಡಿರುವುದರಿಂದ ದಯವಿಟ್ಟು ತಾವು ಮಾತನಾಡಬಹುದು. ಪ್ರತಿಯೊಬ್ಬರಿಗೂ ಕೂಡ ಮಾತನಾಡುವ ಅಧಿಕಾರವಿದೆ. ನೀವೇನು ಮಾತನಾಡುತ್ತೀಯಾ ಎನ್ನತಕ್ಕಂಥದ್ದು ಸರಿಯಾದುದಲ್ಲ. ನಾನು ಕೈಮುಗಿದು ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ : ತಾವು ಈ ತರಹದಲ್ಲಿ ಬೇರೆಯವರನ್ನು ಕೂಡ ಗೌರವಿಸುವುದನ್ನು ಕಲಿಯಿರಿ ಎಂದು ಹೇಳಿ ನಾವು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇಷ್ಟೇ ನನ್ನ ವಿನಂತಿ ಸನ್ಮಾನ್ಯ ಹಿರಿಯ ಸಚಿವರಾದಂಥ ಎಂ.ಪಿ. ಪ್ರಕಾಶ್‌ರವರು ಹಾಗೂ ಹೆಚ್.ಕೆ. ಪಾಟೀಲರಿಗೆ ಒಂದು ವಿನಂತಿಯನ್ನು ಮಾಡುತ್ತೇನೆ. ಸ್ವಲ್ಪ ಕಾನೂನಿನ ಪರಿಜ್ಞಾನ ಇರುವಂಥವರು 25 ವರ್ಷ 30 ವರ್ಷ ಶಾಸಕರಾಗಿ ಕೆಲಸ ಮಾಡಿರುವ ಅನುಭವಿಗಳು ಈ ಕಡೆಯಲ್ಲೂ ಇದ್ದಾರೆ ಹಾಗೂ ಆ ಕಡೆಯಲ್ಲೂ ಕೂಡ ಇದ್ದಾರೆ. ನೀವು ಆಡಳಿತ ಪಕ್ಷದಲ್ಲಿದ್ದೀರಿ. ಆದರೆ ನಾವು ವಿರೋಧ ಪಕ್ಷದಲ್ಲಿದ್ದೇವೆ. ನಾವೇನು ನಿಮಗೆ ಹೇಳಿದೆವೆಂದರೆ ಇನ್ನೂ ಒಂದರ್ಧ ಗಂಟೆ ಆಗಲಿ, ಒಂದು ಗಂಟೆಯಾಗಲಿ ಪರಿವಾಗಿಲ್ಲ. ಒಪ್ಪಂದವಾದಂತೆ ಆ ಕಾನೂನಿನಲ್ಲಿ ಏನು ಅಮೆಂಡ್‌ಮೆಂಟ್ ಮಾಡಬೇಕಾಗಿದೆ ಅದನ್ನು ಸೇರಿಸಿಬಿಟ್ಟು ತದನಂತರ ಇಂಟ್ರಡ್ಯೂಸ್ ಮಾಡಿ. ಅದನ್ನು ನಾವು ಪಾಸ್ ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ. ಆದು ಆಗೋದೇ ಇಲ್ಲ ಎಂದು ನೀವು ಹಠ ಮಾಡಿದರೆ, ಸ್ವೀಕರ್ ಈಗಾಗಲೇ ಬಿಲ್ ಪಾಸ್ ಮಾಡುವಂಥ ಸ್ಟೇಜ್‌ಗೆ ಹೋದಾಗ ನಾನು ಈ ಬಗ್ಗೆ ಓಟ್ ಆಗಬೇಕು, ನಾನು ಡಿವಿಶನ್‌ಗೆ ಪ್ರೆಸ್ ಮಾಡುತ್ತಿದ್ದೇನೆ ಎಂದು ಹೇಳಿದಾಗ ನಿಮ್ಮ ಡ್ಯೂಟಿಯನ್ನು ನೀವು ಮಾಡಬೇಕು. ಇಲ್ಲಾ ಅಂದರೆ, ಅಮೆಂಡ್‌ಮೆಂಟ್ ಏನು ಮಾಡಬೇಕೋ ಅದನ್ನು ಮಾಡಿಕೊಂಡು ತನ್ನಿ. ಇಲ್ಲದೇ ಹೋದರೆ ನಾನು ತಮಗೆ ಹೇಳುತ್ತಿದ್ದೇನೆ, ದಯಮಾಡಿ ಯಾರು ಓಟ್ ಹಾಕುತ್ತಾರೋ ಹಾಕಲಿ, ಅವರಿಗೆ ಬಹುಮತವಿದೆಯಾದ ಕಾರಣ ಪಾಸ್ ಮಾಡಿಕೊಂಡು ಹೋಗಲಿ. ಆದಕಾರಣ ನಾನು ಡಿವಿಶನ್‌ಗೆ ಪ್ರೆಸ್ ಮಾಡುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಯಡಿಯೂರಪ್ಪನವರೆ, ಇದ್ಯಾಕೆ ನೀವು ಆ ಕಡೆ ಮುಖ ಮಾಡಿ ತಿರುಗಿಕೊಂಡು ಕುಳಿತುಕೊಂಡುಬಿಟ್ಟಿರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ನಾನು ಎಷ್ಟು ಹೇಳಿದರೂ ನೀವು ಕೇಳುತ್ತಿಲ್ಲವಲ್ಲಾ. ನಿಮ್ಮ ಎದುರಿಗೇ ನಡೆದಂಥದ್ದು. ನಾವೇನೂ ಹೊಸದನ್ನು ಕೇಳುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ : ಆಯಿತು, ಸರ್ಕಾರ ನೀವು ಹೇಳಿದಂಥ ಸಲಹೆಯನ್ನು, ಮಾಧುಸ್ವಾಮಿಯವರೇ ನಾನು ಹೇಳುವುದನ್ನು ದಯವಿಟ್ಟು ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಡಬಲ್ ಮಾಡುವುದು ಬೇಡ, ಇರೋವಷ್ಟು ತೆಗೆದುಕೊಳ್ಳಲಿ ಎಂದಾಗ ಅದಕ್ಕೆ ನೀವು ಇಲ್ಲಾ, ಆಗೋಲ್ಲಾ ಎಂದಿರಿ. ಅದಕ್ಕೆ ನಾವು ಒಪ್ಪಿಕೊಂಡೆವು. ಇದರಲ್ಲಿ ಬೇಕಾದಷ್ಟು ಕೊಟ್ಟು ತಗೊಂಡಾಗಿದೆ. ಈಗ ಅರಿಯರ್ಸ್ ತೆಗೆದುಕೊಳ್ಳಬೇಕಾದರೆ,,

ಶ್ರೀ ಸಿದ್ಧರಾಮಯ್ಯ : ಡಬಲ್ ಅಂತ ಇವರೇ ಹೇಳಿದ್ದಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ, ಇಲ್ಲ, ಅವರು ಹೇಳಲಿಲ್ಲ. ಸರ್ಕಾರ ಬಹಳ ಒತ್ತಾಯ ಮಾಡಿದಾಗ ನಾವು ಒಪ್ಪಿಕೊಂಡೆವು. ಅಂತಹವನ್ನೆಲ್ಲಾ ನಾವೂ ಬಿಟ್ಟಿದ್ದೇವಲ್ಲಾ ಸಾರ್.

ಶ್ರೀ ಕೆ.ಎಸ್. ಈಶ್ವರಪ್ಪ : ಅಲ್ಲಿ ಏನು ತೀರ್ಮಾನವಾಗಿದೆ ಅದನ್ನು ದಯವಿಟ್ಟು ಒಪ್ಪಿಕೊಳ್ಳಿ ಸ್ವಾಮಿ. ಬೇರೇನೂ ಹೊಸದು ಇಲ್ಲ.

ಶ್ರೀ ಸಿದ್ಧರಾಮಯ್ಯ : ಈಶ್ವರಪ್ಪನವರೇ, ನೀವು ಆ ಸಭೆಯಲ್ಲಿ ಇರಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಇರಲಿಲ್ಲ. ಅದರೆ ಅಲ್ಲಿ ಏನು ತೀರ್ಮಾನವಾಯಿತು ಎಂಬ ಬಗ್ಗೆ ನಮ್ಮ ನಾಯಕರು ನನಗೆ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳಿಗೆ ಹೇಳಿದೆ ಇವೊತ್ತು ರಾಹುಕಾಲದ ಟೈಂ ನೋಡಿಕೊಂಡು, ಅಧಿವೇಶನ ಪ್ರಾರಂಭ ಮಾಡಲು ರಾಹುಕಾಲ ಮುಗಿದ ಮೇಲೆ ಅಂದರೆ 10.30 ಆದಮೇಲೆ ಶುರು ಮಾಡಿ ಎಂದರೆ, ನೋಡಿ ಈಗ ರಾಹುಕಾಲದಲ್ಲಿ ಶುರು ಮಾಡಿರುವುದರಿಂದ ನೋಡಿ ಈಗ ಯಾವ ಪರಿಸ್ಥಿತಿಗೆ ಬಂದು ಕುಳಿತಿದೆ ಎಂದು.

ಶ್ರೀ ಸಿದ್ಧರಾಮಯ್ಯ : ಹಾಗೇನೂ ಇಲ್ಲ. ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಕೊಟ್ಟಿರುವ ಸಲಹೆಯನ್ನು ಒಪ್ಪಿಕೊಂಡು ಅದನ್ನು ನಾವು ಅಮೆಂಡ್‌ಮೆಂಟ್ ಮಾಡುತ್ತೇವೆ. ಈಗ ಬಿಲ್ ಪಾಸ್ ಮಾಡಿ. ಮಾರ್ಚ್ ತಿಂಗಳು ಬರುತ್ತದೆಯಲ್ಲಾ, ಆಗ ಅಮೆಂಡ್‌ಮೆಂಟ್ ಮಾಡೋಣ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಮೆಂಡ್‌ಮೆಂಟ್ ಈಗಲೇ ಮಾಡಿ ತೆಗೆದುಕೊಂಡು ಬನ್ನಿ. ಸರ್ಕಾರ ಮನಸ್ಸು ಮಾಡಿದರೆ ಎಲ್ಲವೂ ಆಗುತ್ತದೆ. ಬಿಲ್‌ನ್ನು 12 ಗಂಟೆ ಮೇಲೆ ತೆಗೆದುಕೊಂಡು ಬನ್ನಿ. ಏಕೆ ನೀವು ಅವಸರ ಮಾಡುತ್ತೀರಿ ? ಏಕೆ ಹಠ ಮಾಡುತ್ತೀರಿ ?

ಶ್ರೀ ಸಿದ್ಧರಾಮಯ್ಯ : ಸಾಯಂಕಾಲ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾಯಂಕಾಲವೇ ತೆಗೆದುಕೊಂಡು ಬನ್ನಿ. ನಾವು ಬಿಲ್ ಪಾಸ್ ಮಾಡಿಕೊಡುತ್ತೇವೆ. ಇವೊತ್ತೇನೇ ಎಲ್ಲಾ ಮುಗಿದ ಮೇಲೆ ಬಿಲ್ ಪಾಸ್ ಮಾಡಿಕೊಡುತ್ತೇವೆ. ನೀವು ಅಮೆಂಡ್‌ಮೆಂಟ್ ಮಾಡಿಕೊಂಡು ತನ್ನಿ.

ಶ್ರೀ ಸಿದ್ಧರಾಮಯ್ಯ : ವಿಧಾನ ಪರಿಷತ್‌ಗೆ ಬಿಲ್ ಹೋಗಬೇಕಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೋಗಲಿ ಸಾರ್. ಅಲ್ಲಿಯೂ ಕಾಯುತ್ತಾರೆ. ವಿಧಾನ ಪರಿಷತ್‌ನಲ್ಲಿ ಬಿಲ್ ಪಾಸ್ ಮಾಡಿಕೊಡದಿದ್ದರೆ ಇಲ್ಲಿ ಪಾಸ್ ಮಾಡಿಕೊಡುವುದಿಲ್ಲ ಎಂದು ನಾವೇನಾದರೂ ಹೇಳಿದ್ದೇವೆಯೇ ? ಏಕೆ ಹೀಗೆ ನೀವು ಹಠ ಮಾಡುತ್ತೀರಿ ? ಸಾರ್ವಜನಿಕರಿಗೆ ಸಂಬಂಧಪಟ್ಟದ್ದು ಇದು. ನಮ್ಮದು, ನಿಮ್ಮದು ಸ್ವಂತದ್ದೇನೂ ಇದರಲ್ಲಿ ಇಲ್ಲ.

ಅಧ್ಯಕ್ಷರು : ಆಯಿತು. ಇದನ್ನು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದನ್ನು ಓರಲಿ ಅಮೆಂಡೆಡ್ ಎಂದು ತೆಗೆದುಕೊಳ್ಳಿ. ಆ ರೀತಿ ತೆಗೆದುಕೊಂಡು ಪಾಸ್ ಮಾಡಿ ಕಳುಹಿಸಿಬಿಡಿ. ಲ್ಯಾಸ್ ಅಮೆಂಡೆಡ್ ಅಲ್ಲಿ ಪಾಸ್ ಮಾಡುತ್ತಾರೆ. ಆದುದರಿಂದ ಅವರು ಇದನ್ನು ಓರಲಿ ಮೂವ್ ಮಾಡಿಬಿಡಲಿ. ಆ ರೀತಿ ಮಾಡಿ. ಏಕೆಂದರೆ ಆರ್ಡಿನೆನ್ಸ್ ರಿಪ್ಲೇಸ್ ಆಗಬೇಕು, ಆ ರೀತಿ ಆಗದಿದ್ದರೆ ಲ್ಯಾಪ್ಸ್ ಆಗುತ್ತದೆ.

ಅಧ್ಯಕ್ಷರು : ಮೂವ್ ಮಾಡಿ ಮಂತ್ರಿಗಳೇ.

Amendment to Clause - 2.

Sri S.R. Morey : Sir, I beg to move :

"That in the said Bill, in clause 2, after sub-clause (3), the following shall be inserted, namely :-

"(3A) In Section 102, in sub-sections (1) and (2), for the words 'assessed having regard to', the words 'equivalent of fifty percent of' shall be substituted."

The question was proposed.

Mr. Speaker : The question is :

"That in the said Bill, in clause 2, after sub-clause (3), the following shall be inserted, namely :-

"(3A) In Section 102, in sub-sections (1) and (2), for the words 'assessed having regard to', the words equivalent of fifty percent of' shall be substituted".

The motion was adopted.

Clause 2, as amended.

Mr. Speaker : The question is :

"That Clause 2 as amended, do stand part of the Bill".

The motion was adopted and

Clause 2 as amended, was added to the Bill.

Amendment to Clause - 3

Sir S.R. Morey : Sir, I beg to move :

"That in the said Bill, in clause 3, for sub-clause (4), the following shall be substituted, namely :-

"(4) In section 109, -

(a) in sub-section (1), after the words and figures "Karnataka Stamp Act, 1957", the words "subject to such rules as may be prescribed" shall be inserted ;

(b) in sub-sections (1) and (2), for the words 'assessed having regard to', the words 'equivalent of fifty percent of; shall be substituted".

The motion was adopted.

Mr. Speaker : The question is :

"That in the said Bill, in clause 3, for sub-clause (4), the following shall be substituted, namely :-

"(4) In Section 109, -

(a) in sub-section (1), after the words and figures, "Karnataka Stamp Act, 1957", the words "Subject to such rules as may be prescribed" shall be inserted ;

(b) in sub-sections (1) and (2), for the words 'assessed having regard to', the words 'equivalent of fifty percent of' shall be substituted".

The motion was adopted.

Clause 3 as amended

Mr. Speaker : The question is :

"That Clause 3 as amended, do stand part of the Bill."

The motion was adopted and Clause 3 as amended, was added to the Bill.

ಖಂಡ 4 ರಿಂದ 6 ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

" ಖಂಡ 4 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 2 ರಿಂದ 6ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

Amendment to Clause No. 1

Sri S.R. Morey : Sir, I beg to move :

"That in the said Bill, in clause 1, in sub-clause (2), for the words, figures and brackets "Sub-sections (1), (2), (4) and (5) of section of section 2", the words, figures and brackets "Sub-sections (1), (2), (3A), (4) and (5) of section 2" shall be substituted."

The question was proposed.

Mr. Speaker: The question is :

"That in the said Bill, in clause 1, in sub-clause (2), for the words, figures and brackets "Sub-sections (1), (2), (4) and (5) of section 2" the words, figures and brackets "Sub-section (1), (2), (3A), () and (5) of section 2" shall be substituted".

The motion was adopted. Clause, as amended :

Mr. Speaker: The question is :

"That Clause 1, as amended, do stand part of the Bill."

The motion was adopted and Clause-1 as amended was added to the Bill.

ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವ ರೀತಿಯಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಸರ್ಕಾರದ ಉತ್ತರ.

(ಅ) ಆರ್ಟಿಕಲ್ 371ರ ಮೇಲೆ ಚರ್ಚೆಗೆ ಅವಕಾಶ ನೀಡುವ ಬಗ್ಗೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ನನಗೆ ಆಶ್ವಾಸನೆ ಕೊಟ್ಟಿದ್ದಿರಿ. ಆರ್ಟಿಕಲ್ 371 ರ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ತಾವು ನನಗೆ ಹೇಳಿದ್ದಿರಿ. ಆದಕಾರಣ ಆರ್ಟಿಕಲ್ 371 ರ ಮೇಲೆ ಚರ್ಚೆ ಮಾಡಲು ದಯಮಾಡಿ ನನಗೆ ಒಂದರ್ಧ ಗಂಟೆ ಅವಕಾಶ ಮಾಡಿಕೊಡಬೇಕು.

(ಆ) ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆಗೆ ಅವಕಾಶ ಕೋರಿ ಚರ್ಚೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ 11.15 ರವರೆಗೂ ಕುಳಿತಿದ್ದೇವೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಗಿದಿದ್ದು ನಾಳೆ ದಿವಸ ಸರ್ಕಾರ ರಿಪ್ಲೈ ಕೊಡುತ್ತದೆ ಎಂದು ಸದನದಲ್ಲಿ ತಾವೇ ಅನೌನ್ಸ್ ಮಾಡಿದ್ದೀರಿ. ಆಮೇಲೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಲಿಲ್ಲ ಎನ್ನುವ ಒಂದು ವಿಚಾರ ಇದೆ. ನಾನು ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್‌ನಲ್ಲಿ ಬೇಕಾದರೆ ಅವರು ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ನಾನಗೆ ಮಾತನಾಡಲು ಅವಕಾಶ ಕೊಡಬಾರದೆ ?

ಶ್ರೀ ಎನ್. ಧರ್ಮಸಿಂಗ್ : ಅದು ಅಧ್ಯಕ್ಷರಿಗೆ ಬಿಟ್ಟ ವಿಚಾರ. ನೀವು ಎಲ್ಲಿಯವರೆಗೆ ಚರ್ಚೆ ಮಾಡುತ್ತೀರಿ ಅದನ್ನು ನಾವು ಕೇಳುತ್ತೇನೆ. ನಾವೇನೂ ಅಭ್ಯಂತರ ಮಾಡುವುದಿಲ್ಲ. ಆದರೆ ಈಗ ಎಲ್ಲಾ ಚರ್ಚೆ ಮುಗಿದುಹೋಗಿದೆ.

(ಗೊಂದಲ)

ಅಧ್ಯಕ್ಷರು : ಈ ವಿಚಾರದಲ್ಲಿ ನನದೇನೂ ಪ್ರಸ್ಟೀಜ್ ಯಾವುದೂ ಇಲ್ಲ. ನಿನ್ನೆಯ ದಿನ ರಾತ್ರಿ 11.30 ರವರೆಗೂ ಸದನದಲ್ಲಿ ಚರ್ಚೆ ನಡೆದಿದೆ. ನಾವು ನಿನ್ನೆಯೇ ರಾಜ್ಯಪಾಲರ ಭಾಷಣದ ಮೇಲೆ ಇವೊತ್ತು ಚರ್ಚೆ ಮತ್ತು ನಾಳೆ ಉತ್ತರ ಎಂದು ಹೇಳಿ ಚರ್ಚೆಯನ್ನು ನಿನ್ನೆಯೇ ಎಷ್ಟು ಹೊತ್ತಾದರೂ ಮುಗಿಸಬೇಕು ಎಂದು ಸಭಾನಾಯಕರು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು